ಮೇ 2023 | ಬೆಲೆ ರೂ. 1

## ದೆಹಲಿ ಕರ್ನಾಟಕ ಸಂಘದ

# ಅಭಿಮತ




ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯಲ್ಲಿ ಭಾಗವಹಿಸಿ ಕನ್ನಡಿಗರ ಹಿರಿಮೆ ಹೆಚ್ಚಿಸಿದ ಹೆಮ್ಮೆಯ ಪ್ರಧಾನಿ ಮಾನನೀಯ ಶ್ರೀ ನರೇಂದ್ರ ಮೋದಿ ಮತ್ತು ರಾಜ್ಯದ ಯಶಸ್ವಿ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಸವರಾಜ್ ಬೊಮ್ಮಾಯಿಯವರನ್ನು, ಮಾನ್ಯ ಶಾಸಕರು, ಗೌರವಾಧ್ಯಕ್ಷರಾದ ಶ್ರೀ ಸಿ.ಟಿ. ರವಿ ಹಾಗು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರವರು ಬರಮಾಡಿಕೊಂಡ ಅವಿಸ್ಮರಣೀಯ ಕ್ಷಣ

# ಅಭಿನಂದನೆ



ರಾಷ್ಟ್ರಪತಿಗಳಿಂದ 2023ರ ಸಾಲಿನ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಹೆಮ್ಮೆಯ ಕನ್ನಡತಿ ಶ್ರೀಮತಿ ರಾಣಿ ಮಾಚಯ್ಯರವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಗೌರವಿಸಿ ಅಭಿನಂದಿಸಲಾಯಿತು. ಈ ಸಂದರ್ಭ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಹಾಗೂ ಪುರಸ್ಕೃತರ ಕುಟುಂಬದವರು ಉಪಸ್ಥಿತರಿದ್ದರು.




ಸಂಘದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ದೆಹಲಿ ಕನ್ನಡಿಗರಿಗೆ ಸಲ್ಲಿಸಿದ ಸೇವೆಗಾಗಿ ಹಿರಿಯ ಕನ್ನಡತಿ ಶ್ರೀಮತಿ ಶಾಲನ್ ಮುರಗೋಡ ಅವರಿಗೆ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಆಚರಣೆ ಸಂದರ್ಭ ಸಂಘದ ಪರವಾಗಿ ಗೌರವ ಸಮರ್ಪಣೆ ನೀಡುತ್ತಿರುವುದು


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

# ಅಭಿಮತ

ಸಂಪುಟ 33 । ಸಂಚಿಕೆ 8

ಮೇ 2023



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ

ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳಿ ಸದಸ್ಯರು

ಕೆ.ಎಸ್. ಮೂರ್ತಿ

ಯಲ್ಲಾಲಿಂಗ ಕೊಪ್ಪದ

ತಿಮ್ಮಪ್ಪ ಜಿ.ಆರ್.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು

ಸಿ.ಎಂ. ನಾಗರಾಜ

ಉಪಾಧ್ಯಕ್ಷರು

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ

ಆರ್. ರೇಣುಕುಮಾರ್

ಕೋಶಾಧಿಕಾರಿ

ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು

ಬಿ. ನಾರಾಯಣ

ಸುಮಿತಾ ಮುರಗೋಡ

ಸಮಿತಿ ಸದಸ್ಯರು

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳಿ

ಸಂಜೀವ ದೇಶಪಾಂಡೆ

ಐ. ಶಂಭುಲಿಂಗಪ್ಪ


## ಸಂಪಾದಕೀಯ

### “ಅನುಭವ ಮಂಟಪದ ಮೂಲಕ ಬಸವೇಶ್ವರರ ವಚನಗಳು, ಅವರ ಪ್ರಜಾಸತ್ತಾತ್ಮಕ ಬೋಧನೆಗಳು ಭಾರತಕ್ಕೆ ಬೆಳಕಿನಂತಿವೆ.”

ಬಂಧುಗಳೇ, ಈ ತಿಂಗಳು 10ನೇ ತಾರೀಖು ಕರ್ನಾಟಕ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ರಾಜ್ಯದ ಎಲ್ಲ ಮತದಾರರು ತಪ್ಪದೇ ಮತದಾನ ಮಾಡಿ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯಲೆಂದು ಅಭಿಮತ ಓದುಗ ಬಳಗದ ಪರವಾಗಿ ಶುಭ ಕೋರುತ್ತೇವೆ.

ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಹೆಗ್ಗುರುತಾಗಿರುವ ದೆಹಲಿ ಕರ್ನಾಟಕ ಸಂಘ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡ–ಕರ್ನಾಟಕದ ಸಂಸ್ಕೃತಿ, ಕಲೆ ಪರಂಪರೆಯನ್ನು ಕಳೆದ ಎಪ್ಪತ್ತೈದು ವರ್ಷಗಳಿಂದ ನಿರಂತರವಾಗಿ ಸಮರ್ಥವಾಗಿ ಪ್ರತಿನಿಧಿಸುತ್ತ ಬರುತ್ತಿದೆ. ನಮ್ಮ ದೆಹಲಿ ಕರ್ನಾಟಕ ಸಂಘದ ಅದ್ದೂರಿ ಅಮೃತ ಮಹೋತ್ಸವ ಸಮಾರಂಭ ಈ ಮಾತಿಗೆ ಪುಷ್ಟಿ ನೀಡುತ್ತದೆ. ಹೊರನಾಡ ಕನ್ನಡಿಗರ ಮುಂದಿನ ತಲೆಮಾರಿಗೆ ನಾಡು ನುಡಿಗಳ ಬಗೆಗೆ ಅರಿವು ಆಸಕ್ತಿ ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಿಕೊಂಡು ಬರುತ್ತಿರುವುದರ ಜೊತೆಗೆ ದೆಹಲಿ ಎನ್.ಸಿ.ಆರ್. ನಲ್ಲಿರುವ ಕನ್ನಡಿಗರಿಗೆ ಸಾವಿರಾರು ಮೈಲು ದೂರದಲ್ಲಿದ್ದರೂ ‘ತಾವೆಲ್ಲರೂ ಒಂದೇ’ ಎನ್ನುವ ಭಾವನಾತ್ಮಕತ ಸಂಬಂಧವನ್ನು ಬೆಳೆಸಲು ಅಗತ್ಯವಾದ ವಾತಾವರಣವನ್ನು ಹುಟ್ಟು ಹಾಕಲು ಪಿಕ್‌ನಿಕ್ ಆಯೋಜನೆ, ಕ್ರಿಕೆಟ್ ಮತ್ತಿತರ ಆಟೋಟಗಳ ಆಯೋಜನೆ, ಕನ್ನಡ ಕಲಿಕೆ, ಸಂಗೀತ ನೃತ್ಯ ತರಬೇತಿ, ಆಹಾರ ಮೇಳ, ಆರೋಗ್ಯ ಮೇಳ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ಪ್ರತಿವರ್ಷ ನಿರ್ವಹಿಸುತ್ತಾ ಬರುತ್ತಿದೆ.

ಮುಖ್ಯವಾಗಿ ಈ ಏಪ್ರಿಲ್ ತಿಂಗಳು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸುಮಾರು 21 ಕ್ರಿಕೆಟ್ ತಂಡಗಳ ಆಟಗಾರರಿಗೆ ತಮ್ಮ ಕ್ರೀಡಾ ಕೌಶಲ್ಯ ಪ್ರದರ್ಶನಕ್ಕೆ ಅವಕಾಶ ಒದಗಿಸಿತ್ತು. ಹಾಗೆಯೇ ಅಮೃತ ಮಹೋತ್ಸವ ವರ್ಷದ ಮತ್ತೊಂದು ವಿಶೇಷ ಎಂದರೆ ಪಿಕ್‌ನಿಕ್ ಆಯೋಜನೆ. ಮೂರ್ನಾಲ್ಕು ವರ್ಷಗಳ ನಂತರ ಆಯೋಜಿಸಿದ್ದ ಹರಿದ್ವಾರ–ರಿಷಿಕೇಶ ಪ್ರವಾಸದಲ್ಲಿ ಸಂಘದ ಆಜೀವ ಸದಸ್ಯರು, ದೆಹಲಿ ಎನ್.ಸಿ.ಆರ್.ನಲ್ಲಿರುವ ನೂರಾರು ಕನ್ನಡ ಕುಟುಂಬಗಳು ಭಾಗವಹಿಸಿದ್ದವು. ದೆಹಲಿ ಕರ್ನಾಟಕ ಸಂಘ ಈ ಪಿಕ್‌ನಿಕ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ಕನ್ನಡಿಗರಿಗೂ ಪ್ರಯಾಣಕ್ಕೆ ಅಗತ್ಯವಾದ ಎಲ್ಲ ಏರ್ಪಾಡುಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಿ ಪ್ರಶಂಸನೀಯ ಕೆಲಸ ಮಾಡಿದೆ. ಹಾಗೆಯೇ ಪ್ರತಿ ವರ್ಷವೂ ತಪ್ಪದೇ ಬಸವ–ಅಕ್ಕ ಮಹಾದೇವಿ ಜಯಂತಿ ಆಚರಣೆಯನ್ನು ಆಯೋಜಿಸಿಕೊಂಡು ಬರುತ್ತಿದೆ.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಸುಧಾರಣೆ ಇವತ್ತಿಗೂ ಎಷ್ಟು ಪ್ರಸ್ತುತ ಎನ್ನುವುದನ್ನು ಹೆಮ್ಮೆಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮಾತಿನಲ್ಲಿಯೇ ಉದಾಹರಿಸಬಹುದು “...ಪ್ರಜಾಪ್ರಭುತ್ವದ ತಾಯಿಯಾಗಿ ನಮ್ಮ ಆದರ್ಶಗಳು ನಮಗೆ ಮಾರ್ಗದರ್ಶನ ನೀಡುತ್ತಿವೆ. ‘ಅನುಭವ ಮಂಟಪ’ದ ಮೂಲಕ ಬಸವೇಶ್ವರರ ವಚನಗಳು, ಅವರ ಪ್ರಜಾಸತ್ತಾತ್ಮಕ ಬೋಧನೆಗಳು ಭಾರತಕ್ಕೆ ಬೆಳಕಿನಂತಿವೆ. ಲಂಡನ್‌ನಲ್ಲಿ ಬಸವೇಶ್ವರರ ಪ್ರತಿಮೆ ಉದ್ಘಾಟನೆ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಅವರ ಬೋಧನೆ (ವಚನ) ಗಳನ್ನು ವಿವಿಧ ಭಾಷೆಗಳಲ್ಲಿ ಬಿಡುಗಡೆ ಮಾಡುವ ಅವಕಾಶವೂ ನನಗೆ ಸಿಕ್ಕಿತು. ಕರ್ನಾಟಕದ ವೈಚಾರಿಕ ಪರಂಪರೆ ಹಾಗೂ ಅದರ ಪ್ರಭಾವ ಅಜರಾಮರ ಎನ್ನುವುದಕ್ಕೆ ಈ ಸಾಧನೆಗಳೇ ಸಾಕ್ಷಿ” “ಮಧ್ಯಕಾಲೀನ ಯುಗದಲ್ಲಿ ಆಕ್ರಮಣಕಾರರು ಭಾರತವನ್ನು ನಾಶ ಮಾಡಲು ಪ್ರಯತ್ನಿಸಿದಾಗ ಮತ್ತು ಸೋಮನಾಥದಂತಹ ಶಿವಲಿಂಗಗಳನ್ನು ಹಾನಿಗೊಳಿಸಿದಾಗ, ದೇವರ ದಾಸಿಮಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಮತ್ತು ಕರ್ನಾಟಕದ ಬಸವೇಶ್ವರರಂತಹ ಸಾಧು ಸಂತರು ‘ಇಷ್ಟಲಿಂಗ’ದ ಮೂಲಕ ಸಾಮಾನ್ಯ ಜನರನ್ನು ಒಟ್ಟುಗೂಡಿಸಿದರು. ಬಾಹ್ಯ ಶಕ್ತಿಗಳು ದೇಶದ ಮೇಲೆ ದಾಳಿ ನಡೆಸಿದಾಗ ರಾಣಿ ಅಬ್ಬಕ್ಕ, ಒನಕೆ ಓಬವ್ವ, ರಾಣಿ ಚೆನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮುಂತಾದ ವೀರಾದಿವೀರರು ಅವರ ಮುಂದೆ ತಡೆ ಗೋಡೆಯಂತೆ ನಿಂತರು” “ಕರ್ನಾಟಕದ ಗತವೈಭವವನ್ನು ಕಣ್ತುಂಬಿಕೊಳ್ಳಲು ಮತ್ತು ಕರ್ನಾಟಕದ ಶ್ರೀಮಂತ ಕಲೆಗಳನ್ನು ಆನಂದಿಸಲು ದೆಹಲಿಯ ಪ್ರತಿ ಕನ್ನಡಿಗ ಕುಟುಂಬವು ಮುಂದೆ ಇಂತಹ ಕಾರ್ಯಕ್ರಮ ನಡೆಸಿದಾಗ ಕನ್ನಡೇತರ ಕುಟುಂಬವನ್ನು ತಮ್ಮೊಂದಿಗೆ ಕರೆತರಲು ಪ್ರಯತ್ನಿಸಬೇಕೆಂದು ನಾನು ಒತ್ತಾಯಿಸುತ್ತೇನೆ..”ಎಂದು ಪ್ರಧಾನ ಮಂತ್ರಿ ಅವರು ಕನ್ನಡಿಗರಿಗೆ ಕಿವಿಮಾತನ್ನು ಹೇಳಿದ್ದಾರೆ.

ಈ ವರ್ಷದ ವಿಶೇಷವೆಂದರೆ, ನಮ್ಮ ದೆಹಲಿ ಕರ್ನಾಟಕ ಸಂಘದ ವತಿಯಿಂದ ಕನ್ನಡ ಕಲಿಯುತ್ತಿರುವ, ಸಂಗೀತ ನೃತ್ಯ ತರಭೇತಿ ಪಡೆಯುತ್ತಿರುವ ಕನ್ನಡ ಮಕ್ಕಳಿಗೆ ವಿಶೇಷವಾದ ಅವಕಾಶ ಒದಗಿಸಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಯಾಗಿಸಲಾಯಿತು. ಈ ಎಲ್ಲ ಕಾರ್ಯಕ್ರಮಗಳನ್ನು ಸಂಘಟಿಸಿ, ಆಯೋಜಿಸಲು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುವ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್ ನೇತೃತ್ವದಲ್ಲಿ ಪ್ರಸ್ತುತ ಕಾರ್ಯಕಾರಿ ಸಮಿತಿ ಅತ್ಯಂತ ಯಶಸ್ವಿಯಾಗಿ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಕೈಂಕರ್ಯ ಮಾಡಿಕೊಂಡು ಬರುತ್ತಿರುವುದು ಅಭಿನಂದನಾರ್ಹ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳೂ ಸೇರಿದಂತೆ ಇನ್ನು ಅನೇಕ ಸ್ಥಳೀಯ ಕನ್ನಡ ಸಂಸ್ಥೆಗಳ ವೈವಿಧ್ಯಮಯ ಕಾರ್ಯಕ್ರಮಗಳ ವರದಿಗಳನ್ನು ಒಳಗೊಂಡ ಅಭಿಮತದ ಈ ಸಂಚಿಕೆಯನ್ನು ತಮ್ಮ ಕೈಗಿಡುತ್ತಿದ್ದೇವೆ. ತಮ್ಮೆಲ್ಲರ ಪ್ರೀತಿ ಸಹಕಾರ ಸದಾ ಇದೇ ರೀತಿ ಮುಂದುವರಿಯಲಿ.

ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 33 ಸಂಚಿಕೆ 8
ಮೇ 2023, ಬೆಲೆ ರೂ. 1

## ಅಧ್ಯಕ್ಷರ ನುಡಿ



ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರೇ, ಅಮೃತ ಮಹೋತ್ಸವ ಸಂದರ್ಭದಲ್ಲಿ ಅತಿ ಹೆಚ್ಚು ಕಾರ್ಯಕ್ರಮಗಳ ಜೊತೆಗೆ ಸಂಘದ ಸದಸ್ಯರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳು ನಡೆಯುತ್ತಾ ಬರುತ್ತಿವೆ. ಈ ಬಾರಿ ವಿಶೇಷವಾಗಿ ನಮ್ಮ ಸದಸ್ಯರಿಗೆ ಕ್ರೀಡಾಕೂಟವನ್ನು ಏರ್ಪಡಿಸಿದ್ದು ಏಪ್ರಿಲ್ 8, 9 ಮತ್ತು 14 ರಂದು ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ದಾಖಲೆ ಸುಮಾರು 21 ತಂಡಗಳು ಭಾಗವಹಿಸಿ ಸುಮಾರು 500ಕ್ಕೂ ಹೆಚ್ಚು ಸದಸ್ಯರುಗಳು ಬಂದು ಭಾಗಿಯಾಗಿದ್ದು ತುಂಬಾ ಖುಷಿ ತಂದಿದೆ. ಈ ಪಂದ್ಯಾವಳಿಯ ಜವಾಬ್ದಾರಿಯನ್ನು ವಹಿಸಿಕೊಂಡು ಯಶಸ್ಸಿಗೆ ಶ್ರಮಿಸಿದ ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಮತ್ತು ಸಂಚಾಲಕರಾದ ಶ್ರೀ ಸಂತೋಷ ಜೆ ಇವರಿಗೆ ಧನ್ಯವಾದಗಳು.

ಇದರ ಜೊತೆಗೆ ವಿಶೇಷವಾಗಿ ಹರಿದ್ವಾರ ರಿಷಿಕೇಶ್ ನಗರಗಳಿಗೆ ಒಂದು ದಿನದ ಪಿಕ್‌ನಿಕ್ ಪ್ರವಾಸವನ್ನು ಆಯೋಜನೆ ಮಾಡಲಾಗಿತ್ತು. ನಾನು ಈ ಹಿಂದೆ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಹಸ್ತಿನಾಪುರಕ್ಕೆ ಸುಮಾರು 12 ಬಸ್ಸುಗಳಲ್ಲಿ ದೆಹಲಿ ಕನ್ನಡಿಗರನ್ನ ಕರೆದುಕೊಂಡು ಹೋಗಿ ಬಂದಿದ್ದೆ, ಜೊತೆಗೆ ಮತ್ತೊಂದು ವರ್ಷ ಚಂಡೀಗಡಕ್ಕೆ ಸರಿಸುಮಾರು 750 ಸಂಘದ ಸದಸ್ಯರನ್ನು ಮತ್ತು ದೆಹಲಿ ಕನ್ನಡಿಗರನ್ನು ಕರೆದುಕೊಂಡು ಹೋಗಿ ಪಿಕ್‌ನಿಕ್ ಕಾರ್ಯಕ್ರಮವನ್ನು ಯಶಸ್ವಿ ಮಾಡಿಸಿದ ನೆನಪುಗಳು ಇನ್ನೂ ಹಚ್ಚ ಹಸಿರಾಗಿದೆ. ಈ ಎರಡು ಪಿಕ್‌ನಿಕ್ ಪ್ರವಾಸಗಳನ್ನು ಮಾಡಿದ ಅನುಭವದೊಂದಿಗೆ ಅಮೃತ ಮಹೋತ್ಸವ ವರ್ಷದಲ್ಲಿ ಹರಿದ್ವಾರ ಮತ್ತು ರಿಷಿಕೇಶ ಪವಿತ್ರ ನಗರಗಳಿಗೆ ಕರೆದುಕೊಂಡು ಹೋಗಿ ಬರಬೇಕೆಂದು ಸಂಘದ ಕೆಲವು ಸದಸ್ಯರ ಕೋರಿಕೆಯನ್ನು ಪರಿಗಣಿಸಿ ಮತ್ತು ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ, ನಿರ್ಧಾರ ಮಾಡಲಾಯಿತು. ಅದರಂತೆ ಏಪ್ರಿಲ್ 16ನೇ ತಾರೀಖು ಸರಿಸುಮಾರು 550 ಕರ್ನಾಟಕ ಸಂಘದ ಸದಸ್ಯರುನ್ನು ಕರೆದುಕೊಂಡು ಹೋಗಿ ಅತ್ಯಂತ ಸುಂದರವಾದ ಹವಾನಿಯಂತ್ರಣ ಬಸ್‌ಗಳ ವ್ಯವಸ್ಥೆ ಜೊತೆಗೆ ಸದಸ್ಯರಿಗೆ ಬ್ರೇಕ್‌ಫಾಸ್ಟ್, ಲಂಚ್, ಡಿನ್ನರ್ ವ್ಯವಸ್ಥೆ ಎಲ್ಲವೂ ಸಹ ಮಾಡಿಸಲಾಗಿತ್ತು ಕರ್ನಾಟಕ ಸಂಘದ ಅಜೀವ ಸದಸ್ಯರಿಗೆ ರಿಯಾಯಿತಿ ನೀಡಿ ಕೇವಲ ಐದುನೂರು ರೂಪಾಯಿಗಳನ್ನು ಪ್ರವಾಸ ಶುಲ್ಕವನ್ನಾಗಿ ತೆಗೆದುಕೊಳ್ಳಲಾಗಿತ್ತು. ಐದು ವರ್ಷಕ್ಕಿಂತಲೂ ಚಿಕ್ಕ ಮಕ್ಕಳಿಗೆ ಪ್ರವಾಸ ಉಚಿತವಾಗಿತ್ತು. ಈ ಪಿಕ್‌ನಿಕ್ ಪ್ರವಾಸ ಕಾರ್ಯಕ್ರಮ ಅಭೂತ ಪೂರ್ವ ಯಶಸ್ವಿಯಾಗಿದೆ, ನಮ್ಮ ಸಂಘದ ಸದಸ್ಯರು ಮತ್ತು ದೆಹಲಿ, ಎನ್.ಸಿ.ಆರ್.ನ ಕನ್ನಡಿಗರಿಗೆ ಮೆಚ್ಚುಗೆಯಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲ ನನ್ನ ಕನ್ನಡ ಬಂಧುಗಳಿಗೆ ಹಾಗು ನಮ್ಮ ಸಂಘದ ಸದಸ್ಯರಿಗೆ ಧನ್ಯವಾದಗಳು. ಬರುವ ವರ್ಷ ಇನ್ನು ಹೆಚ್ಚು ಸದಸ್ಯರುಗಳು ಈ ಮಾದರಿ ಪಿಕ್‌ನಿಕ್ ಆಯೋಜನೆಯಲ್ಲಿ ಭಾಗಿಯಾಗಲೆಂದು ಬಯಸುತ್ತೇನೆ. ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಹಿರಿಯ ಸೋದರರಾದ, ಪಿಕ್‌ನಿಕ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ಎಸ್. ಮೂರ್ತಿಯವರು ಮತ್ತು ಸಂಚಾಲಕರಾದ ಶ್ರೀ ಸಂತೋಷ್ ಜೆ ರವರು ಅಚ್ಚುಕಟ್ಟಾಗಿ ನೀಡಿದ್ದ ಜವಾಬ್ದಾರಿಯನ್ನು ವಹಿಸಿಕೊಂಡು ಸದಸ್ಯರಿಗೆ ಯಾವುದೇ ರೀತಿಯ ತೊಂದರೆಯಾಗದೇ ಕಾರ್ಯಕ್ರಮ ಯಶಸ್ವಿಯಾಗಲು ಪಾತ್ರರಾಗಿರುತ್ತಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾಗೂ ಸಮಿತಿಯ ಪರವಾಗಿ ಧನ್ಯವಾದಗಳು.

ಬಂಧುಗಳೇ, ಭಕ್ತಿ ಭಂಡಾರಿ ಬಸವಣ್ಣ ಮತ್ತು ಶರಣೆ, ಪ್ರಥಮ ಕವಯಿತ್ರಿ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಇದೇ ಏಪ್ರಿಲ್ 30ರಂದು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮವೂ ಅತಿ ಹೆಚ್ಚು ದೆಹಲಿ ಕನ್ನಡಿಗರು ಭಾಗವಹಿಸುವುದರ ಮೂಲಕ ಯಶಸ್ವಿಯಾಗಿದೆ. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಸದಸ್ಯರಾದ ಶ್ರೀ ಬಸವರಾಜ್ ಎಸ್. ಕಲ್ಲೂರುರವರು ಅತ್ಯಂತ ಸುಂದರವಾಗಿ ತಮ್ಮ ಭಾಷಣದಲ್ಲಿ ಬಸವಣ್ಣನವರ ತತ್ವಗಳನ್ನು ಮುಂದಿಟ್ಟರು. ದೆಹಲಿ ಕನ್ನಡಿಗರ ಇತರ ಸಂಘ ಸಂಸ್ಥೆಗಳೂ ಇಂತಹ ಕಾರ್ಯಕ್ರಮಗಳನ್ನು ಬೇರೆ ಬೇರೆ ಕಡೆ ಆಯೋಜಿಸುವ ಬದಲು ಎಲ್ಲರೂ ಒಟ್ಟಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಮಾಡಬೇಕೆಂದು ಕರೆ ನೀಡಿದ್ದಾರೆ. ಜೊತೆಗೆ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದೆಹಲಿ ತಾಂತ್ರಿಕ ಮಹಾವಿದ್ಯಾಲಯದ ವಿನ್ಯಾಸ ವಿಭಾಗದ ಮುಖ್ಯಸ್ಥರಾದ ಡಾ. ರಂಗನಾಥ ಎಸ್. ಸಿಂಗಾರಿರವರು ಸಹ ಅತ್ಯಂತ ಸುಂದರವಾಗಿ ಮಾತನಾಡಿ ತಮ್ಮ ಭಾಷಣದಲ್ಲಿ ಬಸವಣ್ಣ ಮತ್ತು ಅಕ್ಕಮಹಾದೇವಿಯವರ ತತ್ವಗಳನ್ನು ಎಲ್ಲರೂ ತಮ್ಮ ತಮ್ಮ ಜೀವನದಲ್ಲಿ ಅಳವಡಿಸಬೇಕೆಂದು ತಿಳಿಸಿದ್ದಾರೆ. ಮತ್ತೋರ್ವ ಮುಖ್ಯ ಅತಿಥಿ ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿ ಐ.ಆರ್.ಎಸ್. ಅಧಿಕಾರಿಗಳಾದ ಶ್ರೀ ಅಮರೇಶ್ ಪಾಟೀಲ್‌ರವರು, ಮಾತನಾಡಿ 12ನೇ ಶತಮಾನದ ಬಸವಣ್ಣ ಹಾಗೂ ಅಕ್ಕಮಹಾದೇವಿಯವರ ಜೀವನ, ಆದರ್ಶತತ್ವಗಳು, ವಚನಗಳು, ಅನುಭವ ಮಂಟಪ, ಅರಿವಿನ ಮನೆ, ನಿತ್ಯ ದಾಸೋಹ, ವಚನ ಕ್ರಾಂತಿ ಹಾಗೂ ಚಳುವಳಿಗಳ ಬಗ್ಗೆ ಮಾಹಿತಿ ನೀಡಿದ್ದಾರೆ ಇನ್ನೊಂದು ವಿಶೇಷವೆಂದರೆ ಈ ಕಾರ್ಯಕ್ರಮದಲ್ಲಿ ನಮ್ಮ ಸಂಘದ ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಮತ್ತು ಸಂಗೀತ, ನೃತ್ಯ ತರಬೇತಿ ಪಡೆದ ಮಕ್ಕಳು ನೀಡಿದ ಪ್ರದರ್ಶನದಲ್ಲಿ ಬಸವಣ್ಣನ ಮತ್ತು ಅಕ್ಕಮಹಾದೇವಿಯ ವಚನಗಳನ್ನು ಅತ್ಯಂತ ಸುಂದರವಾಗಿ ಮಾತುಗಳಲ್ಲಿ, ನೃತ್ಯರೂಪಕದಲ್ಲಿ ಮತ್ತು ಹಾಡಿನ ರೂಪದಲ್ಲಿ ಎಲ್ಲಾ ಕನ್ನಡಿಗರಿಗೆ ಉಣ ಬಡಿಸಿದ್ದಾರೆ. ಕೇವಲ ಹಿರಿಯರಿಗಲ್ಲದೆ ಕಿರಿಯರು ಸಹ ಬಸವಣ್ಣನವರ ತತ್ವಗಳನ್ನು ಅನುಸರಿಸಲು ಮತ್ತು ನಮ್ಮ ಯುವಜನತೆ ಮತ್ತು ಮಕ್ಕಳು ಕಲಿಯುವ ಅವಕಾಶ ದೆಹಲಿ ಕರ್ನಾಟಕ ಸಂಘ ಮಾಡಿಕೊಟ್ಟಿದೆ. ಬರುವ ದಿನಗಳಲ್ಲಿ ಇನ್ನು ಹೆಚ್ಚಿನ ಯುವ ಪೀಳಿಗೆ ಜಗಜ್ಯೋತಿ ಬಸವೇಶ್ವರ ಅವರ ವಚನ ಸಾಹಿತ್ಯವನ್ನು ತಿಳಿದುಕೊಳ್ಳಲಿ, ಇದಕ್ಕಾಗಿ ಸಂಘವನ್ನು ಬಳಸಿಕೊಳ್ಳಿ ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಆತ್ಮೀಯರೇ, ಮೇ, ಜೂನ್ ತಿಂಗಳಲ್ಲಿ ಮಕ್ಕಳಿಗೆ ಬೇಸಿಗೆ ರಜೆ ಇರುವುದರಿಂದ ದೆಹಲಿಯಲ್ಲಿರುವ ಹೆಚ್ಚಿನ ಕನ್ನಡಿಗರು ತಮ್ಮ ತಾಯಿನಾಡಿಗೆ ಹೋಗಿ ಬರುವ ಕಾರಣ ಈ ಎರಡು ತಿಂಗಳು ನಮ್ಮ ಸಂಘದ ಕಾರ್ಯಕ್ರಮಗಳು ಸ್ವಲ್ಪ ಕಡಿಮೆಯಾಗುತ್ತವೆ. ನಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾದರೂ ಸಹ 15 ದಿನಗಳಿಗೊಮ್ಮೆ ಸಾಹಿತ್ಯದ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಲಿದ್ದೇವೆ. ಜೊತೆಗೆ, ಅಮೃತ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕದಿಂದ ಇಲ್ಲಿ ಬಂದು ನೆಲಸಿ, ಸದಸ್ಯರಾಗಿ ನಂತರ ದೆಹಲಿಯನ್ನು ಬಿಟ್ಟು ಹೋಗಿ ಕರ್ನಾಟಕದಲ್ಲಿ ವಾಸಿಸುತ್ತಿರುವಂತಹ, ದೂರದ ದೆಹಲಿಯಲ್ಲಿ ಅಮೃತ ಮಹೋತ್ಸವ ಸಂಭ್ರಮಾಚರಣೆಯಲ್ಲಿ ಭಾಗವಹಿಸಲಾಗದಿದ್ದಂತಹ ಕೆಲವು ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳಿಗೆ ಅನುಕೂಲವಾಗುವಂತೆ ರಾಜಧಾನಿ ಬೆಂಗಳೂರಿನಲ್ಲಿ ಒಂದು ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ "ಅಮೃತ ಮಹೋತ್ಸವ ಸಂಭ್ರಮ"ವನ್ನು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮದಲ್ಲಿ ದೆಹಲಿಯನ್ನು ಬಿಟ್ಟು ಹೋಗಿರುವ ಅನೇಕ ಸದಸ್ಯರುಗಳು, ಕೇಂದ್ರ ಮಂತ್ರಿಗಳು, ರಾಜ್ಯದ ಬರುವ ಮುಖ್ಯಮಂತ್ರಿಗಳು, ಸಾಹಿತಿಗಳು, ಅನೇಕ ಕನ್ನಡಪರ ಹೋರಾಟಗಾರರು ಭಾಗಿಯಾಗಲಿದ್ದಾರೆ. ದಯವಿಟ್ಟು ಕರ್ನಾಟಕದಲ್ಲಿರುವ ಎಲ್ಲಾ ದೆಹಲಿ ಕರ್ನಾಟಕ ಸಂಘದ ಸದಸ್ಯರು ಬರುವ ಜೂನ್ ನಾಲ್ಕರಂದು ನಡೆಯಲಿರುವ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿಕೊಡಬೇಕೆಂದು ನಿಮ್ಮೆಲ್ಲರಲ್ಲಿ ನಮ್ರತಾ ಪೂರ್ವಕವಾಗಿ ವಿನಂತಿಸುತ್ತೇನೆ.

ಶುಭಾಶಯಗಳೊಂದಿಗೆ,

***ಸಿ.ಎಂ. ನಾಗರಾಜ***
ಅಧ್ಯಕ್ಷರು

### ಮುನ್ನೋಟ

ಆತ್ಮೀಯರೇ,

ದೆಹಲಿ ಬೇಸಿಗೆ ಕಾಲಕ್ಕೆ ಕಾಲಿಟ್ಟಿದ್ದು, ಈಗಾಗಲೇ ಸುಡು ಬಿಸಿಲಿನ ಅನುಭವ ಉಣಬೇಕಿದ್ದ ದೆಹಲಿಗರಿಗೆ ಆಶ್ಚರ್ಯಕರ ರೀತಿಯಲ್ಲಿ ಅಕಾಲಿಕ ಮಳೆಯಿಂದಾಗಿ ತಣ್ಣನೆಯ ದಿವಸಗಳಿಂದಾಗಿ ಅಹ್ಲಾದಕರ ವಾತಾವರಣ, ವರವಾಗಿ ಪರಿಣಮಿಸಿದೆ. ಅಲ್ಲದೇ, ಕಳೆದೆರಡು ತಿಂಗಳುಗಳಿಂದ ಮಕ್ಕಳ ಪರೀಕ್ಷೆ, ವೇಳಾಪಟ್ಟಿ ಹಾಗೂ ತಯಾರಿಯಿಂದಾಗಿ ಅತೀವ ಟೆನ್ಷನ್‌ನಲ್ಲಿದ್ದ ಮಕ್ಕಳು ಹಾಗೂ ಪಾಲಕರು ಪರೀಕ್ಷೆ ಜ್ವರದಿಂದ ಹೊರಬಂದು ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ಅದೇ ರೀತಿ, ದೆಹಲಿ ಕರ್ನಾಟಕ ಸಂಘವೂ ಸಹ ಒಂದು ಅಘೋಷಿತ ಬೇಸಿಗೆ ಬ್ರೇಕ್‌ನತ್ತ ಕಾಲು ಹಾಕುತ್ತಿದೆ. ಈ ನಡುವೆ ನಮ್ಮ ತಾಯ್ನಾಡು ಕರ್ನಾಟಕ ರಾಜ್ಯದ ಚುಕ್ಕಾಣಿ ಹಿಡಿದು ರಾಜ್ಯವನ್ನು ಮುನ್ನಡೆಸುವಂತಹ ಸರ್ಕಾರ ರಚನೆಯ ಕಸರತ್ತು, ವಿಧಾನಸಭಾ ಚುನಾವಣೆಗಳ ಮೂಲಕ ನಡೆಯುತ್ತಿದ್ದು, ಸಪ್ತಕೋಟಿ ಕನ್ನಡಿಗರು ಈ ಪ್ರಕ್ರಿಯೆಯ ಭಾಗವಾಗಿ, ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಯಾಗಲಿದ್ದಾರೆ.

ಈ ಪ್ರಕ್ರಿಯೆ ಶಾಂತಿಯುತವಾಗಿ ನಡೆದು, ಹೊಸ ಸರ್ಕಾರ ಸಮಸ್ತ ಕನ್ನಡಿಗರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸಲೆಂದು ಹಾರೈಸುತ್ತೇನೆ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಏಳು ಮಹಾ ಕಾವ್ಯಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಉಡುಗೊರೆ ನೀಡಿದ ಮಹಾ ಕವಯಿತ್ರಿ, ಲೇಖಕಿ ಶ್ರೀಮತಿ ಡಾ. ಲತಾ ರಾಜಶೇಖರ್

ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಅಂಬಿಗರ ಹಳ್ಳಿಯಲ್ಲಿ 1954 ಜೂನ್ 2 ರಂದು ಎಂ. ಕೃಷ್ಣೇಗೌಡ ಮತ್ತು ಕೆ.ಎಸ್. ಕಾವೇರಮ್ಮ ದಂಪತಿಗಳ ಪುತ್ರಿಯಾಗಿ ಇವರು ಜನಿಸಿದರು. ಉನ್ನತ ಶಿಕ್ಷಣದಲ್ಲಿ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ತಮ್ಮದಾಗಿಸಿಕೊಂಡ ಇವರು ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಮುಗಿಸಿ ಡಾಕ್ಟರೇಟ್ ಪದವಿ ಪಡೆದರು. 'ಕೋಗಿಲೆ ಕೂಗಿದಂತೆ', ಮೊದಲ ಕವನ ಸಂಕಲನಕ್ಕೆ ಮಂಗಳಾ ಕಲಾವೇದಿಕೆಯ ಕುವೆಂಪು ಸಾಹಿತ್ಯ ಪ್ರಶಸ್ತಿ ಹಾಗು ಡಾ. ರಾಜ್ ಸಾಹಿತ್ಯ ಪ್ರಶಸ್ತಿ ಲಭಿಸಿವೆ. ಕೋಗಿಲೆ ಕೂಗಿದಂತೆ ಕ್ಯಾಸೆಟ್ ಬಿಡುಗಡೆಯಾಗಿದೆ. 'ಬೆಳಕಿನ ಹನಿಗಳು' ಇವರ 2ನೆಯ ಕವನ ಸಂಕಲನ.

ಡಾ. ಲತಾರವರ ಪತಿ ಡಾ. ರಾಜಶೇಖರ್‌ರವರು ಮೈಸೂರಿನ ಖ್ಯಾತ ಮಕ್ಕಳ ವೈದ್ಯರಾಗಿದ್ದು ಸದ್ಯ ಡಾ. ರಾಜಶೇಖರ್ ಮೆಡಿಕಲ್ ಫೌಂಡೇಷನ್ ಮತ್ತು ರೀಸರ್ಚ್ ಸೆಂಟರ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರಿಗೆ ದೊರೆತಿರುವ ಪ್ರಶಸ್ತಿ-ಪುರಸ್ಕಾರಗಳು : ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವಿಶ್ವಕವಿ ಪ್ರಶಸ್ತಿ, ಕೆಂಪೇಗೌಡ ರಾಷ್ಟ್ರೀಯ ಪುರಸ್ಕಾರ, ವಿಶ್ವಕರ್ಮ ಪ್ರಶಸ್ತಿ ಮತ್ತು ಚಿನ್ನದ ಪದಕ, ಅಂತರರಾಷ್ಟ್ರೀಯ ವರ್ಷದ ಮಹಿಳೆ ಪ್ರಶಸ್ತಿ, ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಕುಲಪತಿ ದಾ.ಕೆ. ಎಂ. ಮುನ್ಷಿ ಭಾರತೀಯ ವಿದ್ಯಾ ಭವನ ಅವಾರ್ಡ್, ರೋಟರಿ ಸಂಸ್ಥೆಯ ಗೌರವ ಸದಸ್ಯತ್ವ, ಶಾಂತಲ ಪಾಟೀಲ ಸಾಹಿತ್ಯ ಪ್ರಶಸ್ತಿ ಮುಂತಾದವು. ಇಂತಹ ಮಹಾನ್ ಲೇಖಕಿ ಅವರನ್ನು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಬರಲು ಸಂಘದ ಅಧ್ಯಕ್ಷರು ಸಿ.ಎಂ. ನಾಗರಾಜ ಅವರೊಂದಿಗೆ ಮೈಸೂರಿನಲ್ಲಿ ಭೇಟಿ ಮಾಡಿ ಆಹ್ವಾನಿಸಲಾಗಿತ್ತು. ಆ ಸಂದರ್ಭದಲ್ಲಿ ಬುದ್ಧ ಮಹಾದರ್ಶನ', ಯೇಸು ಮಹಾದರ್ಶನ, ಬಸವ ಮಹಾದರ್ಶನ, ಮಹಾವೀರ ಮಹಾದರ್ಶನ,



ರಾಮ ಮಹಾದರ್ಶನ, ಹನುಮ ಮಹಾದರ್ಶನ, ಭಗವದ್ಗೀತಾ ಮಹಾದರ್ಶನ ಎಂಬ ಏಳು ಮಹಾಕಾವ್ಯಗಳನ್ನು ರಚಿಸಿರುವ ಮಹಾ ಕವಯಿತ್ರಿ ಶ್ರೀಮತಿ ಡಾ. ಲತಾ ರಾಜಶೇಖರ್ ಏಳು ಮಹಾಕಾವ್ಯಗಳನ್ನು ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯಕ್ಕೆ ಉಡುಗೊರೆಯಾಗಿ ನೀಡಿದ್ದರು.

ಆನಂತರ ಡಾ. ಲತಾರಾಜಶೇಖರ್‌ರವರು ಫೆ. 25, 26 ರಂದು ದೆಹಲಿಯಲ್ಲಿ ನಡೆದ ಸಂಘದ ಅಮೃತ ಮಹೋತ್ಸವ ಸಮಾರಂಭದಲ್ಲಿ ಆಗಮಿಸಿ ಸಾಹಿತ್ಯ, ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಗೌರವ ಸಮರ್ಪಣೆ ಸ್ವೀಕರಿಸಿರುತ್ತಾರೆ. ಅವರಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳು.

*ಸಂತೋಷ ಜಿ*

### ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**ಜೂನ್ 4, 2023, ಮಧ್ಯಾಹ್ನ 3.00 ಕ್ಕೆ**

**ಅಮೃತ ಮಹೋತ್ಸವ ಸಂಭ್ರಮ**
**ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭ**

ಸ್ಥಳ : ರವೀಂದ್ರ ಕಲಾ ಕ್ಷೇತ್ರ, ಬೆಂಗಳೂರು

**14 ಮೇ 2023, ಭಾನುವಾರ ಸಂಜೆ : 4.30ಕ್ಕೆ**

**ಸಾಹಿತ್ಯ ಸಂಜೆ ಕಾರ್ಯಕ್ರಮ**

**ಮುಖ್ಯ ಅತಿಥಿಗಳು :**

**ಶ್ರೀ ಸಿ.ಎಂ. ಅಂಗಡಿ,** ವಕೀಲರು, ಸುಪ್ರಿಂಕೋರ್ಟ್, ನವದೆಹಲಿ

**ಪ್ರೊ. ರಂಗನಾಥ್ ಎಸ್. ಸಿಂಗಾರಿ,** ಮುಖ್ಯಸ್ಥರು, ವಿನ್ಯಾಸ ವಿಭಾಗ ಡೆಲ್ಲಿ ಟೆಕ್ನಲಾಜಿಕಲ್ ಯುನಿವರ್ಸಿಟಿ, (ಡಿ.ಟಿ.ಯು) ನವದೆಹಲಿ

**ಅಧ್ಯಕ್ಷತೆ : ಡಾ. ಎಂ.ಎಸ್. ಶಶಿಕುಮಾರ್**
ಉಪಾಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

# ದೆಹಲಿ ಕರ್ನಾಟಕ ಸಂಘದಲ್ಲಿ ವೈಶಿಷ್ಟಪೂರ್ಣವಾಗಿ 'ಬಸವಣ್ಣ ಮತ್ತು ಅಕ್ಕಮಹಾದೇವಿ' ಜಯಂತಿ ಆಚರಣೆ




ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಸಭಾಂಗಣದಲ್ಲಿ ಏಪ್ರಿಲ್ 30ರ ಭಾನುವಾರದಂದು ಭಕ್ತಿ ಭಂಡಾರಿ ಬಸವಣ್ಣ ಮತ್ತು ಕನ್ನಡದ ಪ್ರಥಮ ಕವಯಿತ್ರಿ ಶರಣೆ ಅಕ್ಕಮಹಾದೇವಿಯವರ ಜಯಂತಿ ಆಚರಣೆಯನ್ನು ಅರ್ಥಪೂರ್ಣವಾಗಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಿವೃತ್ತ ವಿಶೇಷ ಮೆಟ್ರೊಪಾಲಿಟನ್ ನ್ಯಾಯಾಧೀಶರು (ಸಂಚಾರ) ಮಾಜಿ ವರಿಷ್ಟ ಕಮಾಂಡೆಂಟ್ ಸಿ.ಆರ್.ಪಿ.ಎಫ್ ಹಾಗೂ ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಬಸವರಾಜ ಎಸ್. ಕಲ್ಲೂರರವರು, ಕೇಂದ್ರ ಸಚಿವ ಶ್ರೀ ಭಗವಂತ ಖೂಬರವರ ಆಪ್ತ ಕಾರ್ಯದರ್ಶಿಗಳಾದ ಐ.ಆರ್.ಎಸ್. ಅಧಿಕಾರಿ ಶ್ರೀ ಅಮರೇಶ್ ಪಾಟೀಲ್ ಹಾಗು ಡಿಟಿಯುನ ವಿನ್ಯಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ರಂಗನಾಥ ಎಸ್. ಸಿಂಗಾರಿಯವರು ಆಗಮಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕು. ಜೆನಿತಾ ಉಮೇಶ್‌ರವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳು ಬಸವಣ್ಣನವರ ಪ್ರತಿಮೆಗೆ ಹಾಗೂ ಅಕ್ಕಮಹಾದೇವಿಯ ಭಾವಚಿತ್ರಕ್ಕೆ ಮಾಲಾರ್ಪಣೆ, ಪುಷ್ಪಾರ್ಚನೆ ಮಾಡಿ ದೀಪ ಬೆಳಗುವ ಮೂಲಕ ವಿದ್ಯುಕ್ತ ಚಾಲನೆ ನೀಡಿದರು. ಆಗಮಿಸಿದ್ದ ಅತಿಥಿಗಳನ್ನು ಪರಿಚಯಿಸಿ ಎಲ್ಲರ ಪರವಾಗಿ ಸ್ವಾಗತಿಸಿದ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಾಮಾಜಿಕ ಹರಿಕಾರ, ಕ್ರಾಂತಿಕಾರ, ಜಗಜ್ಯೋತಿ ಬಸವೇಶ್ವರ ಅವರ ಆದರ್ಶ, ವಚನ ತತ್ವಗಳು, ಅಕ್ಕಮಹಾದೇವಿಯ ತ್ಯಾಗ ಮತ್ತು ಸಾಧನೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ ತಿಳಿಸಿದರು.



ಮುಖ್ಯ ಅತಿಥಿ ಶ್ರೀ ಅಮರೇಶ ಪಾಟೀಲ್‌ರವರು ಮಾತನಾಡಿ ಬಸವಣ್ಣನವರ ಆರಂಭಿಕ ಜೀವನದ ಬಗ್ಗೆ ವಿವರಿಸುತ್ತಾ, ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಅವರು 12ನೇ ವಯಸ್ಸಿನಲ್ಲಿಯೇ ತಮ್ಮ ಉಪನಯನ ಸಂದರ್ಭ ತನ್ನ ಸಹೋದರಿಗೆ ಏಕೆ ಉಪನಯನವಿಲ್ಲವೆಂಬ ಪ್ರಶ್ನೆ ಮಾಡಿದ್ದರು. ನಂತರ ಬಿಜ್ಜಳ ರಾಜನ ಆಸ್ಥಾನದಲ್ಲಿ ಕಾರಣಿಕನಾಗಿ, ಖಜಾಂಚಿಯಾಗಿ, ಪ್ರಧಾನಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದರು. ಅನಂತರ ಅಲ್ಲಮಪ್ರಭು ಅಧ್ಯಕ್ಷತೆಯಲ್ಲಿ ಜಾತಿ, ವರ್ಗ, ವರ್ಣ ರಹಿತ ಅನುಭವ ಮಂಟಪ ಅರಂಭಿಸಿದ್ದರು. ಪ್ರಥಮ ಪ್ರಜಾಪ್ರಭುತ್ವದ 'ಶೂನ್ಯವೇಕ' (Speaker) ಆಗಿದ್ದ ಬಸವಣ್ಣನವರು ಅರಿವಿನ ಮನೆ, ನಿತ್ಯ ದಾಸೋಹವನ್ನು ನಡೆಸಿದ್ದರು. ಸುಮಾರು 770 ವಚನಕಾರರು ಸರಳವಾದ ತತ್ವಗಳ ಬದುಕಿನ ಅನುಭವ ಆಧಾರಿತ ಸಾಮಾನ್ಯ ಜನರಿಗೆ ಅರ್ಥವಾಗುವಂತಹ ವಚನ ಸಾಹಿತ್ಯ ರಚಿಸಿದ್ದರು. ಒಂದು ಲಕ್ಷದ ಎಪ್ಪತ್ತು ಸಾವಿರ ಶರಣರು ಇವರ ಅನುಯಾಯಿಗಳಾಗಿದ್ದರು. ಬಸವಣ್ಣನವರು. Leading from the front ನಂತೆ ನಡೆದ ಒಬ್ಬ ಶ್ರೇಷ್ಠ ನಾಯಕರಾಗಿದ್ದರು. ಅಸ್ಪೃಶ್ಯತೆ ನಿವಾರಣೆ, ಒಗ್ಗಟ್ಟು, ಸಾಮಾಜಿಕ ನ್ಯಾಯ, ಹೆಣ್ಣು ಮಕ್ಕಳಿಗೆ ಸಮಾನ ಗೌರವ ನೀಡುವ ಮತ್ತು ಆರ್ಥಿಕ ಸಮಾನತೆ ಮುಂತಾದ ವಿಚಾರಗಳನ್ನು ಪ್ರತಿಪಾದಿಸಿದವರು ಎಂದರು. ಬಸವಣ್ಣನವರ ಅನೇಕ ಪ್ರಮುಖ ವಚನಗಳನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸುತ್ತಾ ಆ ಕಾಲದಲ್ಲಿ ನಂತರ ನಡೆದ ವಚನ ಚಳುವಳಿ, ಕ್ರಾಂತಿಕಾರಿಗಳು ಮತ್ತು ಶರಣರ ನಡುವೆ ಸಂಘರ್ಷ, ಬಿಜ್ಜಳನ ಕೊಲೆ, ಬಸವಣ್ಣನವರಿಗೆ ಶಿಕ್ಷೆ, ಗಡಿಪಾರು, ವಚನಗಳ ನಾಶ ಮುಂತಾದ ಘಟನೆಗಳ ಬಗ್ಗೆ ಮಾಹಿತಿ ತಿಳಿಸಿದರು. ಕನ್ನಡದ ಪ್ರಥಮ ಕವಯಿತ್ರಿ ಮಹಾಶರಣೆ ಅಕ್ಕಮಹಾದೇವಿಯ ಜೀವನದ ಬಗ್ಗೆ ಅಕ್ಕನ ಬಾಲ್ಯ, ಮದುವೆ, ತ್ಯಾಗ, ಕಲ್ಯಾಣ ಪ್ರವೇಶ ಮುಂತಾದ ಕಾಲಘಟ್ಟಗಳ ಬಗ್ಗೆ ವಿವರಗಳನ್ನು ತಿಳಿಸುತ್ತಾ ಅವರ ಕೆಲವು ವಚನಗಳನ್ನು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಗಳಾಗಿದ್ದ ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯದ ಪ್ರೊ. ರಂಗನಾಥ ಎಸ್. ಸಿಂಗಾರಿಯವರು ಮಾತನಾಡಿ 1998 ರಿಂದ ತಾವು ದೆಹಲಿಯಲ್ಲಿದ್ದು ಬಸವಣ್ಣನವರ ಆದರ್ಶಗಳನ್ನು ತಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದೇನೆ. ಈಗ ಕೇವಲ 5 ರಿಂದ 10% ಜನರು ಮಾತ್ರ ಅವುಗಳನ್ನು ಅನುಸರಿಸುತ್ತಾ ಇದ್ದಾರೆ. ಅವರ ಪ್ರತಿಪಾದನೆಯಂತೆ ಹೆಣ್ಣು ಮಕ್ಕಳಿಗೆ ಅವರು ತಾಯಿಯಿರಲಿ, ತಂಗಿ, ಅಕ್ಕ, ಸ್ನೇಹಿತೆ, ಮಗಳು, ಮಡದಿಯಿರಲಿ ಎಲ್ಲರಿಗೂ ಸಮಾನ ಗೌರವ ನೀಡಬೇಕು. ಹಾಗೇನೆ ಹಿರಿಯರಿಗೆ, ತಂದೆ ತಾಯಿಯರಿಗೆ ಗೌರವ ನೀಡಬೇಕು ಅವರ ಮಾತುಗಳನ್ನ ನಾವು ಪಾಲಿಸಬೇಕು. ಅವರು ನಮ್ಮ ಪಾಲಿಗೆ ದೇವರಿದ್ದಂತೆ ಎಂದು ತಿಳಿಸಿದರು. ವಿಜಯಪುರದ ಯೋಗಾಶ್ರಮದಲ್ಲಿ ಕಳೆದ ತಮ್ಮ ವಿದ್ಯಾಭ್ಯಾಸದ ದಿನಗಳನ್ನು ನೆನಪು ಮಾಡಿಕೊಂಡ ಅವರು, ಬಸವಣ್ಣನವರ, ಅಕ್ಕಮಹಾದೇವಿಯವರ ಆದರ್ಶಗಳು, ತತ್ವಗಳು, ವಚನಗಳು ಇಂದಿಗೂ ಪ್ರಸ್ತುತವೆಂದು ಉಲ್ಲೇಖಿಸುತ್ತಾ ತಮ್ಮ ತಾಯಿಯ ಬಗ್ಗೆ ಬರೆದ ಸ್ವರಚಿತ ಕವಿತೆಯನ್ನು ಓದಿ ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿಗಳಾದ, 82 ವರ್ಷದ ದೆಹಲಿ ಕನ್ನಡಿಗ ಶ್ರೀ ಬಸವರಾಜ ಎಸ್ ಕಲ್ಲೂರವರು ಮಾತನಾಡಿ ಬಸವ ಜಯಂತಿ ಮತ್ತು ಅಕ್ಕಮಹಾದೇವಿ ಜಯಂತಿಗಳನ್ನು ಆಚರಿಸಿ ಅವರ ಆದರ್ಶ ತತ್ವಗಳನ್ನು ವರ್ಷಕ್ಕೊಮ್ಮೆ ಸ್ಮರಿಸುವುದಕ್ಕಿಂತ ಅವುಗಳನ್ನ ನಮ್ಮ ನಿತ್ಯ ಜೀವನದಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಂಡು

ನಮ್ಮ ನಡೆ ನುಡಿಗಳಲ್ಲಿ ಅನುಸರಿಸಿಕೊಂಡು ಹೋಗುವುದೇ ಅವರಿಗೆ ನಾವು ನೀಡುವ ನಿಜವಾದ ಗೌರವ ಸಮರ್ಪಣೆ ಎಂದರು. ಬಸವಣ್ಣನವರ ಸಮಾನತೆ ತತ್ವದ ಬಗ್ಗೆ ಮಾತನಾಡುತ್ತಾ ನಾವೆಲ್ಲರೂ ಕಾನೂನಿನ ಮುಂದೆ ಸಮಾನರು (All are equal before law) ಆದ್ದರಿಂದ ಜಾತಿ, ವರ್ಗ, ವರ್ಣಗಳ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಸೇರಿ ಜೀವನ ನಡೆಸಬೇಕು. ತಾವು 62 ವರ್ಷಗಳಿಂದ ಸಾಮಾಜಿಕ ಜೀವನದಲ್ಲಿದ್ದು, ಕಳೆದ 32 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದ ಸದಸ್ಯನಾಗಿ ತಮ್ಮ ಜೀವನದಲ್ಲಿ ಬಸವಣ್ಣನವರ ಹಾಗು ಅಕ್ಕಮಹಾದೇವಿಯವರ ತತ್ವಗಳನ್ನು ಆದಷ್ಟು ಅನುಸರಿಸುತ್ತಿದ್ದೇನೆ ಎಂದರು. ತಾವು ಸಿ.ಆರ್.ಪಿ.ಎಫ್. ಸೇವೆಯಲ್ಲಿದ್ದಾಗ ತಮ್ಮ ನಿಜ ಜೀವನದ ಅನುಭವಗಳನ್ನು ಘಟನೆಗಳನ್ನು ಹಂಚಿಕೊಳ್ಳುತ್ತಾ ಸೈನ್ಯದಲ್ಲಿ ಯಾವ ಜಾತಿ ವರ್ಗ ಭೇದ ಭಾವವಿಲ್ಲದೇ ಎಲ್ಲರೂ ಸಮಾನರಾಗಿ ದೇಶದ ರಕ್ಷಣೆಯಲ್ಲಿ ತೊಡಗುತ್ತಾರೆ. ದೇಶದ ಸೇವೆ ಅತ್ಯಂತ ಶ್ರೇಷ್ಠ ಸೇವೆ No service is greater than the Nation's Service ಎಂದು ಹೇಳಿದರು.

ಬಸವಣ್ಣನವರ ವಚನಗಳು ನಮ್ಮ ಇಂದಿನ ಜೀವನಕ್ಕೆ ಎಷ್ಟು ಪ್ರಸ್ತುತವೆಂಬುದನ್ನ ನಾನು ತಿಳಿದುಕೊಂಡಿದ್ದೇನೆ. ನಾವೆಲ್ಲರೂ ಮೊದಲು ಉತ್ತಮ ಮಾನವರಾಗಬೇಕು. ದೆಹಲಿಯಲ್ಲಿ ಕನ್ನಡಿಗರೆಲ್ಲರೂ ಒಗ್ಗಟ್ಟಾಗಿ ಮುನ್ನಡೆಯಬೇಕು. ಎಲ್ಲಾ ಸಂಘಟನೆಗಳು ಬೇರೆ ಬೇರೆಯಾಗಿ ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ, ಇನ್ನಿತರ ರಾಷ್ಟ್ರೀಯ ಕಾರ್ಯಕ್ರಮಗಳನ್ನು ವಿವಿದೆಡೆ ಮಾಡುವ ಬದಲು ಒಂದೆಡೆ ಸೇರಿ, ದೆಹಲಿ ಕರ್ನಾಟಕ ಸಂಘದಲ್ಲಿ ಮಾಡುವುದು ಅರ್ಥಪೂರ್ಣವಾಗಿರುತ್ತದೆ. ಇಂದು ದೆಹಲಿ ಕರ್ನಾಟಕ ಸಂಘವು AN EPITOME OF KANNADIGAS IN DELHI ಆಗಿದೆ ಎಂದು ಹೇಳುತ್ತಾ, ಸಂಘದ ಕಾರ್ಯಕ್ರಮಗಳಲ್ಲಿ ಎಲ್ಲರೂ, ಸಕ್ರಿಯವಾಗಿ ಯಾವುದೇ ಭೇದ ಭಾವವಿಲ್ಲದೆ, ಭಿನ್ನಾಭಿಪ್ರಾಯಗಳಿಲ್ಲದೆ ಒಟ್ಟಾಗಿ ಭಾಗವಹಿಸಿ ಒಂದು ಮಾದರಿಯಾಗಬೇಕೆಂದು ಕಿವಿ ಮಾತು ಹೇಳಿದರು. ಹಾಗೇನೇ ಕೊರೋನಾ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು ಮತ್ತು ಸಿಬ್ಬಂದಿ ದೆಹಲಿ ಕನ್ನಡಿಗರಿಗೆ ನೀಡಿದ ನಿಸ್ವಾರ್ಥ ಸೇವೆ ಶ್ಲಾಘನೀಯ ಎಂದರು. ಕರ್ನಾಟಕದ ಫೀಲ್ಡ್ ಮಾರ್ಷಲ್ ಕಾರಿಯಪ್ಪ, ಜನರಲ್ ತಿಮ್ಮಯ್ಯನವರ ಸೇವೆಯನ್ನು ಸ್ಮರಿಸಿಕೊಂಡ ಶ್ರೀ ಕಲ್ಲೂರರು ಬಸವಣ್ಣನವರು ಅನುಭವ ಮಂಟಪದಲ್ಲಿ (Experimental Gathering) ಮನುಷ್ಯನಲ್ಲಿ ಮನುಷ್ಯತ್ವ ತೋರಿಸಿಕೊಟ್ಟರು. 12ನೇ ಶತಮಾನದಲ್ಲಿಯೇ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರತಿಪಾದಿಸಿದವರು. ವರ್ಣ ವ್ಯವಸ್ಥೆಯ ವಿರುದ್ಧ ಕ್ರಾಂತಿಯನ್ನು ತಂದವರು. ಅವರ ಅಸ್ಪೃಷ್ಯತೆ, ಸ್ತ್ರೀ ಸಮಾನತೆ, ಆರ್ಥಿಕ ಸಮಾನತೆ ಮುಂತಾದ ತತ್ವಗಳು ಮತ್ತು ವಚನಗಳು ಜನರ ಜೀವನದಲ್ಲಿ ಎಂದೆಂದಿಗೂ ಪ್ರಸ್ತುತ ಎಂದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯವರು ಫೆಬ್ರವರಿ ತಿಂಗಳಿನಲ್ಲಿ ಪ್ರಧಾನಿ ಮೋದಿಯವರನ್ನು ಕರೆಸಿ ಅಮೃತ ಮಹೋತ್ಸವವನ್ನು ಯಶಸ್ವಿಯಾಗಿ ಆಚರಣೆ ಮಾಡಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಬಸವಣ್ಣ, ಬುದ್ಧ ಅಂಬೇಡ್ಕರ್ ಕೇವಲ ಕೆಲವು ಸೀಮಿತ ವರ್ಗಕ್ಕೆ ಅಥವಾ ಒಂದು ಪ್ರಾಂತ್ಯಕ್ಕೆ ಸೇರಬಾರದು, ಅವರ ಸಿದ್ಧಾಂತಗಳನ್ನು ಎಲ್ಲರೂ ಅಳವಡಿಸಬೇಕು, ನಮ್ಮ ದೆಹಲಿ ಕರ್ನಾಟಕ ಸಂಘದಲ್ಲಿ ಎಲ್ಲರೂ ಸಮಾನರು, ನಾವು ಕೇವಲ ಕನ್ನಡ ಜಾತಿಯವರು, ಹೊರನಾಡು ದೆಹಲಿಯಲ್ಲಿ ಕನ್ನಡ ಕಟ್ಟುವ, ಉಳಿಸುವ ಮತ್ತು ಬೆಳೆಸುವ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದೇವೆ, ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿರುವ ದೆಹಲಿ ಕನ್ನಡಿಗರ ಮುಂದೆ ಇಂದು ಬಸವಣ್ಣ ಹಾಗು ಅಕ್ಕಮಹಾದೇವಿ ಜಯಂತಿ ವಿಶಿಷ್ಟವಾಗಿ ಆಚರಿಸುತ್ತಿರುವುದು, ಸಂಘದಲ್ಲಿ ತರಬೇತಿ ತೆಗೆದುಕೊಳ್ಳುತ್ತಿರುವ ಸ್ಥಳೀಯ ಕನ್ನಡ ಮಕ್ಕಳಿಂದ ವಚನ ವಾಚನ, ಗಾಯನ, ನೃತ್ಯಗಳು ಪ್ರಸ್ತುತಿಯಾಗುತ್ತಿರುವುದು ತಮಗೆ ಅತೀವ ಸಂತೋಷ ತಂದಿದೆ, ಇದಕ್ಕಾಗಿ ತಮ್ಮ ಅಮೂಲ್ಯ ಸಮಯ ಸೇವೆ ನೀಡುತ್ತಿರುವ ಶ್ರೀಮತಿ ರೂಪಶ್ರೀಯವರಿಗೆ, ಶ್ರೀಮತಿ ರಜನಿಯವರಿಗೆ ಧನ್ಯವಾದಗಳು ಹಾಗೂ ಈ ಕಾರ್ಯಕ್ರಮದ ರೂವಾರಿಗಳಾದ ಶ್ರೀಮತಿ ಪೂಜಾ ರಾವ್ ಮತ್ತು ಶ್ರೀಮತಿ ಮಾಲಿನಿ ಪ್ರಹ್ಲಾದ್‌ರವರಿಗೆ ಮತ್ತಿತರರಿಗೆ, ವಿಶೇಷವಾಗಿ ಮಕ್ಕಳಿಗೆ ಹಾರ್ದಿಕ ಅಭಿನಂದನೆಗಳು ಎಂದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್‌ರವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್‌ರವರು ವಂದನಾರ್ಪಣೆ ಸಲ್ಲಿಸಿದರು.

ಸಭಾ ಕಾರ್ಯಕ್ರಮದ ನಂತರ ಸಂಘದ ಕನ್ನಡ ಕಲಿಕಾ ಕೇಂದ್ರದ ಸ್ಥಳೀಯ ಮಕ್ಕಳು ಬಸವಣ್ಣ ಮತ್ತು ಅಕ್ಕಮಹಾದೇವಿಯವರ ಬಗ್ಗೆ ಕಿರು ಭಾಷಣ, ವಚನ ವಾಚನ, ಸಂಘದ ಸಂಗೀತ ಮತ್ತು ನೃತ್ಯ ತರಬೇತಿ ಶಿಬಿರದ ಮಕ್ಕಳು ನೃತ್ಯ ಪ್ರದರ್ಶನ ಮಾಡಿದರು. ಕುಮಾರ ಇಶಾಂತ್ ಗೌಡ, ಸೃಜನ್ ರಂಗನಾಥ್, ಮನಿಷ್ ಧರ್ಮ ಬಸವಣ್ಣನವರ ಜೀವನದ ಬಗ್ಗೆ ಕಿರು ಮಾಹಿತಿ ನೀಡಿದರು. ಪುಟಾಣಿ ಮಕ್ಕಳಾದ ಮಾನಸಿ, ಜೀವನ್, ಕೀರ್ತನ, ಮೊನಿಷ್ಕ, ಸಾನಿಧ್ಯ, ತಾನ್ಯ, ಶರಣ್ಯ, ಸಾನ್ವಿಕ, ಸೃಜನ್ ಸುಧೀರ್, ಸುಹಾನಿ ಸುಧೀರ್, ದಿವ್ಯ, ಲಿಪಿಕಾ, ವೈಷ್ಣವಿ, ಸಾನಿಧ್ಯ ಗೌಡ, ಸನ್ನಿಧಿ ಎಸ್. ಗೌಡ, ಅನರ್ಘ್ಯ, ಕೋಶಲ್, ಸೃಜನ್ ರಂಗನಾಥ್ ವಚನ ವಾಚನ ಮಾಡಿದರು. ಶ್ರೀಮತಿ ರೂಪಶ್ರೀ ನರಸಿಂಹಮೂರ್ತಿಯವರ ಮಾರ್ಗದರ್ಶನದಲ್ಲಿ ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಮತ್ತು ವಿದುಷಿ ರಜನಿ ರಾವ್ ಅವರಿಂದ ನೃತ್ಯ ತರಬೇತಿ ಪಡೆದ ಮಕ್ಕಳು ನೀಡಿದ ಪ್ರದರ್ಶನ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ದೆಹಲಿ ಎನ್.ಸಿ.ಆರ್. ಕನ್ನಡಿಗರ ಪ್ರಶಂಸೆಗೆ ಪಾತ್ರವಾಯಿತು.

ನಂತರ ಬೀದರ್‌ನಿಂದ ಆಗಮಿಸಿದ್ದ ಶ್ರೀ ಪ್ರಭಾಕರ್‌ರವರ ನೇತೃತ್ವದ ನೂಪುರ ನೃತ್ಯ ಅಕಾಡೆಮಿಯ ಕಲಾವಿದರು ಬಸವಣ್ಣ, ಅಕ್ಕಮಹಾದೇವಿಯವರ ವಚನ ಗೀತೆಗಳಿಗೆ ನೃತ್ಯರೂಪಕಗಳನ್ನು, ಜನಪದ ಗೀತೆಗಳ ನೃತ್ಯವನ್ನು ಪ್ರಸ್ತುತಪಡಿಸಿದರು. ಶ್ರೀ ಸುಬ್ರಹ್ಮಣ್ಯ ಪ್ರಭು ಹಾಗೂ ಶ್ರೀಮತಿ ಪೂಜಾ ರಾವ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರ್ವಹಿಸಿದರು. ಆಕರ್ಷಕವಾದ ಪೋಷಾಕುಗಳಿಂದ ಅದ್ಭುತವಾಗಿ ನೀಡಿದ ವೈವಿಧ್ಯಮಯ ನೃತ್ಯರೂಪಕಗಳನ್ನು ವೀಕ್ಷಿಸಿ ದೆಹಲಿ ಕನ್ನಡಿಗರು ಕರತಾಡನಗಳಿಂದ ಮೆಚ್ಚುಗೆ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಕನ್ನಡ ಕಲಿಕಾ ಕೇಂದ್ರ, ಸಂಗೀತ ಮತ್ತು ನೃತ್ಯ ತರಬೇತಿ ಶಿಬಿರದ ಮಕ್ಕಳಿಗೆ ಮತ್ತು ನೂಪುರ ನೃತ್ಯ ಅಕಾಡೆಮಿ ತಂಡದ ಕಲಾವಿದರಿಗೆ ಪದಕ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು. ಆಗಮಿಸಿದ್ದ ಅತಿಥಿಗಳಿಗೆ, ಹಿರಿಯ ಕನ್ನಡತಿ ಶ್ರೀಮತಿ ಶಾಲನ್ ಮುರಗೋಡ ಮತ್ತು ನೂಪುರ ತಂಡದ ಮುಖ್ಯಸ್ಥ ಶ್ರೀ ಪ್ರಭಾಕರ್ ಮತ್ತು ಸುಬ್ರಹ್ಮಣ್ಯ ಪ್ರಭುರವರಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಈ ವರ್ಷದ ದಾಖಲೆ 21 ತಂಡಗಳು ಭಾಗವಹಿಸಿದ ಕ್ರಿಕೆಟ್ ಪಂದ್ಯಾವಳಿಯ ವಿನ್ನರ್ಸ್ ಆದ ಕರ್ನಾಟಕ ಕಮಾಂಡೋಸ್ ತಂಡಕ್ಕೆ ಹಾಗೂ ರನ್ನರ್ ಅಪ್ ಆದ ಕರ್ನಾಟಕ ಭವನ ತಂಡಗಳಿಗೆ ಮತ್ತು ಅತ್ಯುತ್ತಮ ಬೌಲರ್, ಬ್ಯಾಟ್ಸ್‌ಮನ್ ಹಾಗೂ ಆಲ್‌ರೌಂಡರ್ ಆಟಗಾರರಿಗೆ ನಗದು ಬಹುಮಾನ ಚೆಕ್‌ಗಳನ್ನು ನೀಡಲಾಯಿತು.

***ಅಭಿಮತ ವರದಿ***






ಕು. ಇಶಾಂತ್ ಎಸ್. ಗೌಡ



ಕು. ಸೃಜನ್ ರಂಗನಾಥ್



ಕು. ಮನೀಷ್ ಧರ್ಮ



ಕು. ತಾನ್ಯ



ಕು. ಶ್ರೇಯಾ ಪ್ರಭಾಕರ್



ಕು. ದಿವ್ಯ, ಕು. ಆಷಿಖಾ ಮತ್ತು ಕು. ವೈಷ್ಣವಿ




ಕನ್ನಡ ಮಕ್ಕಳಿಂದ ಸಮೂಹ ನೃತ್ಯ



ಕು. ಸಾನ್ವಿಕ, ಕು. ಶರಣ್ಯ, ಕು. ಸುಜನ್ ಮತ್ತು ಕು. ಸುಹಾನಿ



ಕು. ಮಾನಸಿ, ಕು. ಜೀವನ್ ಮತ್ತು ಕು. ಕೀರ್ತನ



ಕು. ಮೊನಿಷ್ಕಾ ಮತ್ತು ಕು. ಸಾನಿಧ್ಯ. ಎಸ್



ಕು. ಅನರ್ಘ್ಯ ಮತ್ತು ಕು. ಕೋಶಲ್



ಕು. ಸಾನಿಧ್ಯ ಮತ್ತು ಕು. ಸನ್ನಿಧಿ ಎನ್. ಗೌಡ




ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಜೊತೆ ಮುಖ್ಯ ಅತಿಥಿಗಳಾದ ಶ್ರೀ ಬಸವರಾಜ ಕಲ್ಲೂರರಿಂದ ಕನ್ನಡ ಕಲಿಕಾ ಕೇಂದ್ರದ ಶಿಕ್ಷಕಿ ಶ್ರೀಮತಿ ರೂಪಶ್ರೀಯವರಿಗೆ ಮತ್ತು ಕನ್ನಡ ಕಲಿಕೆ, ನೃತ್ಯ ಮತ್ತು ಸಂಗೀತ ತರಬೇತಿ ಶಿಬಿರದ ಮಕ್ಕಳಿಗೆ ಪದಕ ಮತ್ತು ಪ್ರಶಸ್ತಿ ಪತ್ರ ಪ್ರದಾನ ಮಾಡಿದ ಸಂದರ್ಭ

# ದೆಹಲಿ ಕರ್ನಾಟಕ ಸಂಘದಿಂದ ಹರಿದ್ವಾರ ರಿಷಿಕೇಶ್ ಗೆ ಆಹ್ಲಾದಕರ ಪಿಕ್ ನಿಕ್ ಪ್ರವಾಸದ ಯಶಸ್ವಿ ಆಯೋಜನೆ




ದಿನಾಂಕ 16 ನೇ ಏಪ್ರಿಲ್ 2023 ರ ಭಾನುವಾರದಂದು ದೆಹಲಿ ಕರ್ನಾಟಕ ಸಂಘದ ವತಿಯಿಂದ ಸಂಘದ ಅಜೀವ ಸದಸ್ಯರುಗಳಿಗೆ ಮತ್ತು ದೆಹಲಿ ಎನ್.ಸಿ.ಆರ್.ನ ಕನ್ನಡಿಗರಿಗೆ ಉತ್ತರಖಂಡದ ಪವಿತ್ರ ವಿಶ್ವಪ್ರಸಿದ್ಧ ಪ್ರವಾಸಿ ಕೇಂದ್ರಗಳಾದ ಹರಿದ್ವಾರ ಮತ್ತು ರಿಷಿಕೇಶ್ ನಗರಗಳಿಗೆ ಒಂದು ದಿನದ ಪಿಕ್‌ನಿಕ್ ಪ್ರವಾಸವನ್ನು ಸಂಘದ ಅಮೃತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಆಯೋಜಿಸಲಾಗಿತ್ತು.

ದೆಹಲಿಯ ನಾನಾ ಭಾಗಗಳಿಂದ ಹಾಗು ಎನ್.ಸಿ.ಆರ್. ಪ್ರದೇಶದ ಗುರುಗ್ರಾಮ ಮತ್ತು ನೋಯಿಡಾದಿಂದ ಸುಸಜ್ಜಿತ ಹವಾ ನಿಯಂತ್ರಿತ ಕೋಚ್ ಬಸ್ಸುಗಳನ್ನು ನಿಯೋಜಿಸಲಾಗಿತ್ತು. ಐದು ವರ್ಷಕ್ಕಿಂತಲೂ ಚಿಕ್ಕ ಮಕ್ಕಳಿಗೆ ಪ್ರವಾಸ ಉಚಿತವಾಗಿತ್ತು, ಸಂಘದ ಅಜೀವ ಸದಸ್ಯರುಗಳಿಗೆ ಪ್ರವಾಸದ ಶುಲ್ಕದಲ್ಲಿ ರಿಯಾಯಿತಿ ನೀಡಲಾಗಿತ್ತು. ಈ ಒಂದು ದಿನದ ಪ್ರವಾಸವನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರವರ ಪರಿಕಲ್ಪನೆ ಮತ್ತು ಮಾರ್ಗದರ್ಶನದಲ್ಲಿ ಪಿಕ್‌ನಿಕ್ ಸಮಿತಿಯ ಅಧ್ಯಕ್ಷ ಶ್ರೀ ಕೆ.ಎಸ್. ಮೂರ್ತಿ, ಸಂಚಾಲಕ ಶ್ರೀ ಸಂತೋಷ ಜೆ ಹಾಗೂ ಸಂಘದ ಅಜೀವ ಸದಸ್ಯರನ್ನೊಳಗೊಂಡ ಅನುಭವಿ ತಂಡವು ಅತ್ಯಂತ ಮುತುವರ್ಜಿಯಿಂದ ಆಯೋಜಿಸಿದ್ದರು. ಸಂಘದ ಅಜೀವ ಸದಸ್ಯರು ಮತ್ತು ಅವರ ಕುಟುಂಬದವರು, ಮಕ್ಕಳು, ಇತರ ಆಸಕ್ತ ದೆಹಲಿ ಎನ್.ಸಿ.ಆರ್. ಕನ್ನಡಿಗರು, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸಿಬ್ಬಂದಿ ಮತ್ತು ಬಸ್ ಚಾಲಕರೂ ಸೇರಿದಂತೆ ಸುಮಾರು 550ಕ್ಕೂ ಹೆಚ್ಚು ಪ್ರವಾಸಿಗರು ಈ ಪಿಕ್‌ನಿಕ್‌ನಲ್ಲಿ ಪಾಲ್ಗೊಂಡಿದ್ದರು. ಪ್ರತಿಯೊಂದು ಬಸ್ಸುಗಳಿಗೂ ಪ್ರತ್ಯೇಕ ರೂಟ್ ನಂಬರ್ ಮತ್ತು ಕರ್ನಾಟಕದ ಪ್ರಸಿದ್ಧ ನದಿಗಳಾದ ತುಂಗಭದ್ರಾ, ಕುಮಾರಧಾರ, ನೇತ್ರಾವತಿ, ಶರಾವತಿ, ಕೃಷ್ಣ, ಕಾವೇರಿ, ಮಹದಾಯಿ, ಘಟಪ್ರಭಾ, ಭೀಮಾ, ಅರ್ಕಾವತಿ ಮತ್ತು ಹೇಮಾವತಿ ಮುಂತಾದ ಹೆಸರುಗಳನ್ನು ಹಂಚಿಕೆ ಮಾಡಿ ಅನುಭವಿ ಬಸ್ ಸಂಯೋಜಕರನ್ನು ನೇಮಿಸಲಾಗಿತ್ತು. ಕ್ರಮವಾಗಿ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀ ಸಿ.ಎಂ. ನಾಗರಾಜ ಮತ್ತು ಶ್ರೀ ಸಂತೋಷ ಜೆ, ಶ್ರೀ ಕೆ.ಎಸ್. ಮೂರ್ತಿ, ಶ್ರೀ ದಯಾನಂದ ಬಿಂಗೆ, ಶ್ರೀ ಬಿ. ನಾರಾಯಣ, ಶ್ರೀ ಪ್ರಭಾಕರ ಮಡ್ಡಿತೋಟ ಮತ್ತು ಶ್ರೀ ತಿಮ್ಮಪ್ಪ ಜಿ.ಆರ್., ಶ್ರೀ ಚಂದ್ರಶೇಖರ ಮತ್ತು ಶ್ರೀ ಸಾಬುದುರ್ಗ, ಶ್ರೀ ಎನ್.ಆರ್. ಶ್ರೀನಾಥ, ಶ್ರೀ ಕೃಷ್ಣರಾಜ್, ಶ್ರೀ ಕೆ.ಬಿ. ಬಸವರಾಜ್, ಶ್ರೀ ದೇವೇಂದ್ರಪ್ಪ ಮತ್ತು ಶ್ರೀ ರಾಜಪ್ಪ ಹಾಗು ಶ್ರೀ ಉದಯ್ ಕುಮಾರ್ ಅವರು ಅತ್ಯಂತ ಜವಾಬ್ದಾರಿಯುತವಾಗಿ ಆಯಾ ಬಸ್ ಮಾರ್ಗಗಳ ಸಂಯೋಜಕರಾಗಿ ಅಚ್ಚುಕಟ್ಟಾಗಿ ಪ್ರವಾಸದ ನಿರ್ವಹಣೆಯಲ್ಲಿ ಸಹಕರಿಸಿದರು.

ದೆಹಲಿ ಕರ್ನಾಟಕ ಸಂಘದಿಂದ ಮೂರು, ಗುರುಗ್ರಾಮದಿಂದ ಎರಡು, ಕರ್ನಾಟಕ ಭವನ ಉದ್ಯೋಗಿಗಳ ವಸತಿ ನಿಲಯದಿಂದ ಎರಡು, ದ್ವಾರಕಾ/ ಜನಕಪುರಿಯಿಂದ ಒಂದು, ಪಶ್ಚಿಮ ವಿಹಾರ್/ ರೋಹಿಣಿಯಿಂದ ಒಂದು, ಅಶೋಕ್ ವಿಹಾರ್ ಪೊಲೀಸ್ ವಸತಿ ಸಮುಚ್ಚಯದಿಂದ ಒಂದು ಹಾಗು ಜೆಎಸ್ಎಸ್ ನೋಯ್ಡಾದಿಂದ ಒಂದು ಹೀಗೆ ಸುಮಾರು 11 ಸುಸಜ್ಜಿತ ಬಸ್ಸುಗಳು ಮುಂಜಾನೆ 6:00 ರಿಂದ 6.30ಗಂಟೆ ಸುಮಾರಿಗೆ, ದೆಹಲಿ ಎನ್.ಸಿ.ಆರ್.ನ ಆಯಾ ಪ್ರದೇಶಗಳಿಂದ ಪೂರ್ವ ನಿಯೋಜಿತ ಪಿಕ್‌ಅಪ್ ಜಾಗಗಳು ಮತ್ತು ಮಾರ್ಗಗಳಿಂದ ಪ್ರಯಾಣ ಆರಂಭಿಸಿದವು. ತಮ್ಮ ತಮ್ಮ ಆರಂಭಿಕ ಜಾಗಗಳಿಂದ ಹೊರಟ ಬಸ್ಸುಗಳನ್ನು ನೇರವಾಗಿ ಮುಜಫರನಗರದ ಬೈಪಾಸ್‌ನಲ್ಲಿರುವ ಪ್ಯಾರಡೈಸ್ ರೆಸ್ಟೋರೆಂಟ್ ಜಾಗಕ್ಕೆ ತಲುಪಲು ನಿರ್ದೇಶನ ನೀಡಲಾಗಿತ್ತು. ಬೆಳಿಗ್ಗೆ 8.30 ರಿಂದ 9.30 ರ ನಡುವೆ ನಿಗದಿತ ರೆಸ್ಟೋರೆಂಟ್ ಜಾಗವನ್ನು ತಲುಪಿದ ಎಲ್ಲರಿಗೂ ಬಿಸಿಬಿಸಿ ಉಪಾಹಾರ ನೀಡಲಾಯಿತು. ಈ ವಿರಾಮದ ವೇಳೆ ರುಚಿಯಾದ ಉಪ್ಪಿಟ್ಟು ಚಿತ್ರಾನ್ನ, ಕಾಫಿ ಟೀ ಸವಿದ ನಮ್ಮ ಹೆಮ್ಮೆಯ ದೆಹಲಿ ಕನ್ನಡಿಗರು ತಮ್ಮ ಕುಟುಂಬದವರ ಜೊತೆ ಜೊತೆಗೆ ಅನೇಕ ಚಿರಪರಿಚಿತ ಮತ್ತು ಅಪರಿಚಿತ ಕನ್ನಡಿಗರೊಂದಿಗೆ ಕುಶಲೋಪರಿ ಹಂಚಿಕೊಂಡರು.

ಸಂಘದ ಖಜಾಂಚಿ ಶ್ರೀ ರಾಧಾಕೃಷ್ಣ ಅವರು ಮುತುವರ್ಜಿಯಿಂದ ಪ್ರವಾಸಿಗರ ಊಟ ಉಪಚಾರದ ಮೇಲ್ವಿಚಾರಣೆ ವಹಿಸಿಕೊಂಡಿದ್ದರು. ಪ್ರತಿಯೊಬ್ಬರಿಗೂ ನೀರಿನ ಬಾಟಲ್, ಬಿಸ್ಕಿಟ್ ಪ್ಯಾಕ್, ಜ್ಯೂಸ್ ಮತ್ತು ಸೇಬು ಹಣ್ಣನ್ನು ಒಳಗೊಂಡ ಸ್ನಾಕ್ ಪ್ಯಾಕ್ ವಿತರಿಸಲಾಯಿತು.

ಬೆಳಗಿನ ಉಪಹಾರದ ನಂತರ ಎಲ್ಲ ಬಸ್ಸುಗಳು ಹರಿದ್ವಾರದ ಕಡೆ ಪ್ರಯಾಣ ಮುಂದುವರಿಸಿದವು. ಆಯಾ ಬಸ್ಸುಗಳಲ್ಲಿ ಪ್ರವಾಸಿಗರು ತಮ್ಮ ತಮ್ಮ ಪರಿಚಯ ಮಾಡಿಕೊಂಡು ಇತರರ ಬಗ್ಗೆ ಮಾಹಿತಿ ಪಡೆದರು, ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು. ಶಿಶುಗೀತೆಗಳು, ಭಾವಗೀತೆಗಳು, ಚಿತ್ರಗೀತೆಗಳು ಅಂತ್ಯಾಕ್ಷರಿ, ರಸಪ್ರಶ್ನೆ, ಕಥೆ ಹೇಳಿಕೆ ಆಶುಭಾಷಣ, ಅಭಿನಯ, ಡಂ ಶರಾಡ್ಸ್ ಟಾಮ್ ಡಿಕ್ & ಹ್ಯಾರಿ, ಚರ್ಚೆ, ನೃತ್ಯ ಕುಣಿತ ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಮತ್ತು ಬಹಳ ಆಸಕ್ತಿಯಿಂದ ಪಾಲ್ಗೊಂಡರು. ಹರಿದ್ವಾರ ಮತ್ತು ರಿಷಿಕೇಶ್ ನಗರಗಳ ಐತಿಹಾಸಿಕ ಮಹತ್ವ ಮತ್ತು ಆಸುಪಾಸಿನ ಪ್ರವಾಸ ತಾಣಗಳ ಬಗ್ಗೆ ಮಾಹಿತಿಗಳನ್ನು ಹಂಚಿಕೊಂಡರು.

ಪ್ರಸಿದ್ಧ ಮತ್ತು ಪವಿತ್ರ ಗಂಗಾ ತಟದಲ್ಲಿರುವ ಹರಿದ್ವಾರ ತಲುಪಿದ ನಂತರ ವಿಶ್ವ ಯೋಗ ನಗರಿ ರಿಷಿಕೇಶ್ ಕಡೆ ಎರಡು ಮೂರು ಬಸ್ಸುಗಳು ನಡೆದವಾದರೂ, ಅವರು ನೀಡಿದ ಮಾಹಿತಿ ಅನುಸಾರ ಆ ಮಾರ್ಗದಲ್ಲಿದ್ದ ವಾಹನದಟ್ಟಣೆ ಮತ್ತು ರಿಶಿಕೇಶ್‌ನಲ್ಲಿದ್ದ ಸಂಚಾರ ಮತ್ತು ಪಾರ್ಕಿಂಗ್ ನಿರ್ಬಂಧನೆಗಳನ್ನು ಗಮನದಲ್ಲಿಟ್ಟುಕೊಂಡು ಉಳಿದ ಬಸ್ಸುಗಳನ್ನು ಹರಿದ್ವಾರದಲ್ಲೇ ನಿಯಂತ್ರಿಸಲಾಯಿತು.

ಅಲ್ಲಿನ ಗಂಗಾ ತಟದ ಬಡೆ ಹನುಮಾನ್ ಮಂದಿರ ಮತ್ತು ಶ್ರೀ ಉಡುಪಿ ಪಾಲಿಮಾರು ಮಠದ ಪರಿಸರಕ್ಕೆ ತಲುಪಲು ಎಲ್ಲಾ ಬಸ್ಸುಗಳಿಗೆ ಮಾರ್ಗ ಸೂಚಿ ಕೊಡಲಾಯಿತು. ಅಲ್ಲಿ ಎಲ್ಲರಿಗೂ ಮಧ್ಯಾಹ್ನದ ಭೋಜನ ವ್ಯವಸ್ಥೆ ಏರ್ಪಡಿಸಲಾಗಿತ್ತು. ತಂಪಾದ ಮಜ್ಜಿಗೆ ಜೊತೆ, ಶುಚಿ ರುಚಿಕರವಾದ ಊಟವನ್ನು ಸವಿದು ಕನ್ನಡಿಗ ಮಿತ್ರರು ಸಂಭ್ರಮಿಸಿದರು.



ಅನಂತರ, ಅಲ್ಲಿನ ಗೋಶಾಲೆ, ಹನುಮಾನ್ ಪ್ರತಿಮೆ ವೀಕ್ಷಣೆ ಮಾಡಿದ ಪ್ರವಾಸಿಗರು, ಪಕ್ಕದಲ್ಲಿ ಹರಿಯುತ್ತಿದ್ದ ಗಂಗಾ ಕಾಲುವೆಯ ತಣ್ಣನೇ ನೀರಿನಲ್ಲಿ ಸ್ನಾನ ಮಾಡಿ ಪುಳಕಿತಗೊಂಡರು. 'ತುಂಗಾಪಾನ ಮಾಡು, ಗಂಗಾ ಸ್ನಾನ ಮಾಡು' ಎನ್ನುವ ಮಾತು ಎಲ್ಲರಿಗೂ ಸಾಂದರ್ಭಿಕವಾಗಿ ಅನ್ವಯಿಸುತ್ತಿತ್ತು. ಹೆಚ್ಚಿನನೇಕರು ಹರಿದ್ವಾರದ ಪ್ರಸಿದ್ಧ ಮತ್ತು ಪವಿತ್ರವಾದ ಗಂಗೆ ತಟದಲ್ಲಿರುವ ಹರ್ ಕಿ ಪೌರಿಗೆ ತೆರಳಿ ಗಂಗಾ ನೀರಿನಲ್ಲಿ ಮಿಂದು ದೇವರ ದರ್ಶನ ಪಡೆದರು. ಕೆಲವರು ಚಂಡಿದೇವಿ, ಮಾನಸ ದೇವಿ ದೇವಾಲಯಗಳಿಗೂ ಭೇಟಿ ನೀಡಿದರೆ, ಇನ್ನಿತರರು ಹರಿದ್ವಾರ ನಗರ ವೀಕ್ಷಣೆ ಮಾಡಿದರು. ರಿಷಿಕೇಶ್ ತಲುಪಿದವರು, ಅಲ್ಲಿನ ಕೆಲವು ಪವಿತ್ರ ದೇವಾಲಯಗಳಿಗೆ ಭೇಟಿ ನೀಡಿ, ತೂಗು ಸೇತುವೆ (ರಾಮ್ ಝೂಲ ಲಕ್ಷ್ಮಣ್ ಝೂಲ)ಗಳನ್ನು ಹಾಗು ಪವಿತ್ರ ಗಂಗಾ ನದಿತಟಗಳನ್ನು ವೀಕ್ಷಿಸಿ ಹರಿದ್ವಾರಕ್ಕೆ ಮರಳಿದರು. ಸಂಜೆಯ ಕಾಫಿ ಟೀ ಜೊತೆ, ಪಕೋಡ ಬಿಸ್ಕಿಟ್‌ಗಳನ್ನು ಸವಿದ ನಂತರ ಒಟ್ಟಾಗಿ ಎಲ್ಲಾ ಪ್ರವಾಸಿಗರ ಸಮೂಹ ಫೋಟೋ ಕ್ಲಿಕ್ ಮಾಡಲಾಯಿತು. ಅನಂತರ ಮರಳಿ ದೆಹಲಿ ಕಡೆ ಬಸ್ಸುಗಳ ಪ್ರಯಾಣ ಮುಂದುವರಿದು ಮತ್ತೊಮ್ಮೆ, ಪ್ಯಾರಡೈಸ್ ರೆಸ್ಟೋರೆಂಟ್ ಸ್ಥಳದಲ್ಲಿ ತಯಾರು ಮಾಡಿದ್ದ ಬಿಸಿ ಬಿಸಿ ರಾತ್ರಿಯ ಭೋಜನವನ್ನು ಸವಿದ ನಮ್ಮ ಕನ್ನಡಿಗ ಬಂಧು ಮಿತ್ರರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.



ಆಯಾ ಮಾರ್ಗದ ಬಸ್ಸುಗಳು ಪೂರ್ವ ನಿರ್ಧಾರಿತ ಡೆಸ್ಟಿನೇಷನ್ ಜಾಗಗಳಿಗೆ ಮುಂದಿನ ಪ್ರಯಾಣ ನಡೆಸಿ, ಮದ್ಯರಾತ್ರಿಯ ನಂತರ 1 ರಿಂದ 3 AM ನಡುವೆ ತಮ್ಮ ತಮ್ಮ ಡ್ರಾಪ್ ಆಫ್ ಪಾಯಿಂಟ್‌ಗಳಿಗೆ/ಮನೆಗಳಿಗೆ ಸುರಕ್ಷಿತವಾಗಿ ತಲುಪಿದರು. ಸಣ್ಣ ಪುಟ್ಟ ವಿಳಂಬಗಳನ್ನು ಹೊರತುಪಡಿಸಿ, ಯಾವುದೇ ಅಹಿತಕರ ಘಟನೆ ನಡೆಯದೆ, ಸುಗಮವಾಗಿ 550ಕ್ಕೂ ಹೆಚ್ಚು ಕನ್ನಡಿಗರು ಈ ಪಿಕ್‌ನಿಕ್ ಪ್ರವಾಸದಲ್ಲಿ ಉತ್ಸಾಹ ಹರ್ಷಲ್ಲೋಸದಿಂದ ಬಾಗಿಯಾಗಿ, ಕಾರ್ಯಕ್ರಮ ಎಲ್ಲರ ಪ್ರಶಂಸೆ ಪಡೆದದ್ದು ದೆಹಲಿ ಕರ್ನಾಟಕ ಸಂಘದ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ. ದೆಹಲಿ ಕನ್ನಡಿಗರೊಂದಿಗೆ ಬೆರೆಯುವ ಪರಸ್ಪರ ಸ್ನೇಹ, ಬಾಂಧವ್ಯಗಳನ್ನು ಹಾಗು ಪ್ರೀತಿ, ಗೌರವಗಳನ್ನು ಹೆಚ್ಚಿಸಲು ಅನುಕೂಲಕರವಾದ ವಾತಾವರಣ ಮತ್ತು ಅವಕಾಶವನ್ನು ಈ ಪಿಕ್‌ನಿಕ್ ಪ್ರವಾಸ ಮಾಡಿಕೊಟ್ಟಿದ್ದು ಉಲ್ಲೇಖನೀಯ.

ದೆಹಲಿ ಕರ್ನಾಟಕ ಸಂಘದ, ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಮತ್ತು ಸದಸ್ಯರೂ, ಪಿಕ್‌ನಿಕ್ ಕಮಿಟಿಯ ಸರ್ವ ಸದಸ್ಯರು ಮತ್ತು ಸ್ವಯಂ ಸೇವಕರ ಪರಿಶ್ರಮದಿಂದ ಈ ನಮ್ಮ ಸಂಘದ ಪಿಕ್‌ನಿಕ್ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಈ ಹಿಂದೆಯೂ ಸಹ ಸಂಘವು ಹಸ್ತಿನಾಪುರ ಮತ್ತು ಚಂಡೀಗಡ ನಗರಗಳಿಗೆ ಆಯೋಜಿಸಿದ್ದ ಪಿಕ್‌ನಿಕ್ ಪ್ರವಾಸಗಳು ಅಂದಿನ ಕಾರ್ಯದರ್ಶಿಯಾಗಿ ಮುತುವರ್ಜಿ ವಹಿಸಿದ್ದ ಶ್ರೀ ಸಿ.ಎಂ. ನಾಗರಾಜರ ಪರಿಶ್ರಮದಿಂದ ಅಭೂತಪೂರ್ವ ಯಶಸ್ಸು ಕಂಡಿರುವುದನ್ನು



ಇಲ್ಲಿ ಸ್ಮರಿಸಬಹುದಾಗಿದೆ. ಆ ಪ್ರವಾಸಗಳಲ್ಲಿ ಪಾಲ್ಗೊಂಡ ಅನೇಕರು ಈ ಬಾರಿಯೂ ಬಂದಿದ್ದು ಸಂಘದ ಈ ಕಾರ್ಯಕ್ರಮದ ಜನಪ್ರಿಯತೆಯನ್ನು ಸಾಬೀತುಪಡಿಸುತ್ತದೆ.

ಈ ಪಿಕ್‌ನಿಕ್ ಪ್ರವಾಸಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು. ಸಂಘದ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗೆ ಧನ್ಯವಾದಗಳು, ಅತ್ಯಂತ ಸಮರ್ಪಕವಾಗಿ ಕೇಟರಿಂಗ್ ಮತ್ತು ಟ್ರಾನ್ಸ್‌ಪೋರ್ಟ್ ಸರ್ವಿಸ್‌ಗಳನ್ನು ನೆರವೇರಿಸಿಕೊಟ್ಟ ನಮ್ಮ ಸಂಘದ ಖಜಾಂಚಿ ಶ್ರೀ ರಾಧಾಕೃಷ್ಣರವರಿಗೆ ಹಾಗೂ ಗೋಲ್ಡಿ ಬಸ್ ಗ್ಯಾರೇಜ್ ಮಾಲಿಕ ಶ್ರೀ ಗೋಲ್ಡಿ ಅನೇಜ ಅವರಿಗೆ ಧನ್ಯವಾದಗಳು. ಪಿಕ್‌ನಿಕ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಮಸ್ತ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ಅದರ ಯಶಸ್ಸಿನ ಶ್ರೇಯ ಸಲ್ಲಲೇಬೇಕು. ಬಸ್ ನಿಯೋಜಕರು, ಜನಕಪುರಿ ಕನ್ನಡ ಕೂಟ, ಮಹಿಳಾ ಮಂಡಳಿ, ಗುರುಗಾಂವ್ ಕನ್ನಡ ಸಂಘ, ಜೆ.ಎಸ್.ಎಸ್. ಸಂಸ್ಥೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಡಿ.ವಿ.ಜಿ.ಸ್, ಸ್ನೇಹಾ, ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ, ಇತರ ಸಂಘ ಸಂಸ್ಥೆಗಳ ಸದಸ್ಯರು ಪದಾಧಿಕಾರಿಗಳು, ಕರ್ನಾಟಕ ಭವನ ಉದ್ಯೋಗಿಗಳು ಮತ್ತು ಕುಟುಂಬದವರು, ಮಕ್ಕಳು ಮತ್ತು ಎಲ್ಲರಿಗೂ ವಿಶೇಷವಾಗಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಪಿಕ್‌ನಿಕ್ ಸಮಿತಿ ಪರವಾಗಿ ಹೃತ್ಪೂರ್ವಕ ವಂದನೆಗಳು ಮತ್ತು ಅಭಿನಂದನೆಗಳು.

ಈ ಒಂದು ದಿನದ ಪ್ರವಾಸ, ದೆಹಲಿಯ ವ್ಯಸ್ತ ಜೀವನದಿಂದ ಸ್ವಲ್ಪ ವಿರಾಮ ಪಡೆದು ಮಕ್ಕಳು ಮತ್ತು ಪೋಷಕರೊಂದಿಗೆ ಕ್ವಾಲಿಟಿ ಸಮಯ ಕಳೆಯಲು, ಮೂರು ತಲೆಮಾರಿನವರು ಒಟ್ಟಾಗಿ ಇತರರೊಂದಿಗೆ ತಮ್ಮ ಜೀವನದ ಕೆಲವು ಕ್ಷಣಗಳನ್ನು ಸಂತೋಷವಾಗಿ ಕಳೆಯಲು, ಸಹ ಕನ್ನಡಿಗರೊಂದಿಗೆ ತಮ್ಮ ಅನುಭವವನ್ನು ಹಂಚಿಕೊಳ್ಳಲು ಹಾಗು ಹೊಸ ಹೊಸ ದೆಹಲಿ ಕನ್ನಡಿಗರನ್ನು ಪರಿಚಯ ಮಾಡಿಕೊಳ್ಳಲು ಒಂದು ಉತ್ತಮ ಅವಕಾಶ ಮಾಡಿಕೊಟ್ಟಿದ್ದು ಪಿಕ್‌ನಿಕ್ ಆಯೋಜಕರಿಗೆ ಧನ್ಯತಾ ಭಾವ ಮೂಡಿಸಿದೆ. ಹಿರಿಯ ದೆಹಲಿ ಕನ್ನಡಿಗರು ಶ್ರೀ ಬಿ.ಎಸ್. ಕಲ್ಲೂರು, ಶ್ರೀ ಎನ್.ಎ. ಮಾಧವ, ಡಾ. ಕಿರಣ್ ದಂಬಳ್ಕರ, ಶ್ರೀ ಅಶೋಕ ಹನಮಸಾಗರ್, ಶ್ರೀ ಪಿ.ಎಸ್. ಶೆಟ್ಟಿ, ಶ್ರೀ ಕೆ.ಎಸ್.ಜಿ. ಶೆಟ್ಟಿ, ಡಾ. ವೀರಭದ್ರಪ್ಪ ಮತ್ತು ಅವರ ಕುಟುಂಬದವರು, ಡಾ. ನಿರಂಜನ್ ನಾಯ್ಕ್, ಡಾ. ಶ್ರೀಧರ ರೆಡ್ಡಿ, ಶ್ರೀ ಸುರೇಶ್ ಆಚಾರ್ಯ ಮುಂತಾದ ಹಿರಿಯರು ಮತ್ತು ಮುದ್ದಿನ ಮಕ್ಕಳು ಭಾಗವಹಿಸಿದ್ದು ವಿಶೇಷವಾಗಿತ್ತು. ಈ ಪುಟ್ಟ ಪ್ರವಾಸದ ಅನುಭವ, ಜ್ಞಾನಾರ್ಜನೆಗೆ 'ಕೋಶ ಓದಿ ನೋಡು ಇಲ್ಲಾ ದೇಶ ಸುತ್ತಿ ನೋಡು' ಎಂಬ ಮಾತನ್ನು ರುಜುವಾತು ಮಾಡಿದಂತ್ತಿತ್ತು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರು ಡಾ ಶಶಿಕುಮಾರ್ ಮತ್ತು ಶ್ರೀಮತಿ ಪೂಜಾ ರಾವ್, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಖಜಾಂಚಿ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಸುಮಿತಾ ಮುರಗೋಡ ಮತ್ತು ಶ್ರೀ ಬಿ. ನಾರಾಯಣ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರುಗಳು ಹಾಗು ಪಿಕ್‌ನಿಕ್ ಸಮಿತಿ ಸರ್ವ ಸದಸ್ಯರು, ಸಮಸ್ತ ದೆಹಲಿ ಕನ್ನಡಿಗರು ನೀಡಿದ ಸಲಹೆ ಸಹಕಾರಗಳಿಗೆ ನಾವು ಧನ್ಯತಾಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

***ಸಂತೋಷ ಜೆ.,*** ಸಂಚಾಲಕರು ಮತ್ತು

***ಕೆ.ಎಸ್. ಮೂರ್ತಿ,*** ಅಧ್ಯಕ್ಷರು,ಪಿಕ್‌ನಿಕ್ ಸಮಿತಿ

















# ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ವರ್ಷದಲ್ಲಿ 'ಐತಿಹಾಸಿಕ ಕ್ರಿಕೆಟ್ ಪಂದ್ಯಾವಳಿ'




ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಟೋಟ ಸ್ಪರ್ಧೆಗಳನ್ನು ಆಯೋಜಿಸುತ್ತ ಬಂದಿರುವ ಕರ್ನಾಟಕ ಸಂಘ 75ನೇ ಅಮೃತ ಮಹೋತ್ಸವ ಸಂಭ್ರಮದಲ್ಲಿ ಏರ್ಪಡಿಸಲಾದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅತಿ ಹೆಚ್ಚು ದೆಹಲಿ ಕನ್ನಡಿಗರು ಭಾಗವಹಿಸುವ ಮೂಲಕ ಐತಿಹಾಸಿಕ ದಾಖಲೆಯೊಂದಿಗೆ ಅಮೃತ ಮಹೋತ್ಸವ ವರ್ಷಕ್ಕೆ ಮೆರಗು ತಂದು ಕೊಟ್ಟಿದ್ದು ಹೆಮ್ಮೆ ಪಡುವ ವಿಷಯ.

ರಾಷ್ಟ್ರ ರಾಜಧಾನಿ ಹಾಗೂ ದೆಹಲಿ ಎನ್‌ಸಿಆರ್ ನಲ್ಲಿ ನೆಲೆಸಿರುವ ಕನ್ನಡಿಗರು ಮತ್ತು ಕನ್ನಡ ಪರ ಸಂಘಟನೆಗಳು ಕ್ರಿಕೆಟ್ ಪಂದ್ಯಾವಳಿ ಎಂದರೆ ಹಬ್ಬದ ವಾತಾವರಣದಲ್ಲಿ ಸಂಭ್ರಮಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದೇ ರೀತಿ ಈ ಬಾರಿ 75ನೇ ಅಮೃತ ಮಹೋತ್ಸವ ವರ್ಷದ ಕ್ರಿಕೆಟ್ ಪಂದ್ಯಾವಳಿ ಆಯೋಜನೆಯ ರೂಪುರೇಷೆ ಮಾಡಿಕೊಂಡು ಮುಂದೆ ಸಾಗಿದ ನಮಗೆ 21 ತಂಡಗಳು ಭಾಗವಹಿಸುವ ಮೂಲಕ 315 ಜನ ದೆಹಲಿ ಕನ್ನಡಿಗ ಆಟಗಾರರು ಪಂದ್ಯಾವಳಿಯಲ್ಲಿ ಭಾಗವಹಿಸಿ ಆಟವಾಡಿದ್ದು ಇತಿಹಾಸವಾಗಿದೆ.

ದಿನಾಂಕ 8,9 ಮತ್ತು 14 ಏಪ್ರಿಲ್ 2023 ರಂದು ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಯೂರ KSTDC, ಪೂಸಾ ವಾರಿಯರ್ಸ್, ಕರ್ನಾಟಕ ಏರ್ ಸ್ಟ್ರೈಕರ್ಸ್, ದೆಹಲಿ ತುಳು ಸಿರಿ, ಕನ್ನಡ ಗೆಳೆಯರು, ಶಿವಸಾಯಿ ಗ್ರೂಪ್-A, ಶಿವಸಾಯಿ-B, ಜನಕಪುರಿ ವಾರಿಯರ್ಸ್, ಜನಕಪುರಿ ಕನ್ನಡ ಕೂಟ ಕ್ರಿಕೆಟ್ ಕ್ಲಬ್, ಗುರುಗಾಂವ್ ಕನ್ನಡ ಸಂಘ, ಕರ್ನಾಟಕ ಭವನ ಕ್ರಿಕೆಟ್ ಟೀಮ್, ಕನ್ನಡ ಸಿರಿ ಗೆಳೆಯರು, ಎಸ್. ಎಸ್. ಕ್ಯಾಪಿಟಲ್, ಉತ್ತರ ಕರ್ನಾಟಕ ವಾರಿಯರ್ಸ್, ಕರ್ನಾಟಕ ಕಮಾಂಡೋಸ್, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ಜೆಎಸ್‌ಎಸ್, ಡಿಕೆಎಸ್‌ಎಸ್‌ಎಸ್, ಕೂರ್ಗ್ ವಾರಿಯರ್ಸ್, ಕರಾವಳಿ ಕಿಂಗ್ಸ್ ಮತ್ತು ಪೂಸಾ ಕಿಸಾನ್ ಸೇರಿ 21 ತಂಡಗಳು ಭಾಗವಹಿಸಿದ್ದವು. ದಿನಾಂಕ ಏಪ್ರಿಲ್ 8ನೇ ತಾರೀಖು ಶನಿವಾರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎ.ಐ.ಸಿ.ಟಿ.ಯುನ ಅಧ್ಯಕ್ಷರಾದ ಪ್ರೊ. ಟಿ.ಜಿ. ಸೀತಾರಾಮರವರು ಉದ್ಘಾಟಿಸುವ ಮೂಲಕ ನವದೆಹಲಿಯ ವಿನಯ್ ಮಾರ್ಗದಲ್ಲಿರುವ ಸಿವಿಲ್ ಸರ್ವಿಸಸ್ ಕ್ರಿಕೆಟ್ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ಆರಂಭಗೊಂಡಿತು.

ಮೊದಲಿಗೆ ಗುರುಗಾಂವ್ ಕನ್ನಡ ಸಂಘ ಮತ್ತು ಕರ್ನಾಟಕ ಭವನ ನಡುವೆ ನಡೆದ ಪಂದ್ಯದಲ್ಲಿ ಕರ್ನಾಟಕ ಭವನ ಜಯಗಳಿಸಿ ಶ್ರೀಧನ್ ಪದ್ಯ ಪುರುಷೋತ್ತಮರಾದರು. ಕರ್ನಾಟಕ ಏರ್ ಸ್ಟ್ರೈಕರ್ಸ್ ಮತ್ತು ಕರಾವಳಿ ಕಿಂಗ್ಸ್ ನಡುವೆ ನಡೆದ ಎರಡನೇ ಪಂದ್ಯದಲ್ಲಿ ಕರ್ನಾಟಕ ಏರ್ ಸ್ಟ್ರೈಕರ್ಸ್ ಜಯಗಳಿಸಿದರು. ಸಾಗರ್ ಪಂದ್ಯ ಪುರುಷೋತ್ತಮರಾದರು. ಮೂರನೇ ಪಂದ್ಯ ಪೂಸ ಕಿಸಾನ್ ತಂಡ ಮತ್ತು ಕನ್ನಡ ಸಿರಿ ಗೆಳೆಯರು ನಡುವೆ ನಡೆದು ಪೂಸಾ ಕಿಸಾನ್ ತಂಡ ಜಯಗಳಿಸಿತು. ಮನೋಜ್ ಜಿ ಪಂದ್ಯ ಪುರುಷೋತ್ತಮರಾದರು ಮಯೂರ KSTDC ಮತ್ತು ಜನಕಪುರಿ ಕ್ರಿಕೆಟ್ ಕ್ಲಬ್ ನಡುವೆ ನಡೆದ ನಾಲ್ಕನೇ ಪಂದ್ಯದಲ್ಲಿ ಮಯೂರ KSTDC ವಿಜೇತರಾದರು. ಸಚಿನ್ ಪಂದ್ಯ ಪುರುಷೋತ್ತಮರಾದರು. ಉತ್ತರ ಕರ್ನಾಟಕ ವಾರಿಯರ್ಸ್ ಹಾಗೂ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ನಡುವೆ ನಡೆದ ಐದನೇ ಪಂದ್ಯ ಟೈ ಆಯ್ತು, ನಂತರ ಸೂಪರ್ ಓವರ್‌ನಲ್ಲಿ ಆಟವಾಡಿದ ಎರಡು ತಂಡಗಳಲ್ಲಿ ಅಂತಿಮವಾಗಿ ಉತ್ತರ ಕರ್ನಾಟಕ ವಾರಿಯರ್ಸ್ ಜಯಗಳಿಸಿದರು. ಓಂಕಾರ್ ಪಂದ್ಯ ಪುರುಷೋತ್ತಮರಾದರು. ಆರನೇ ಪಂದ್ಯದಲ್ಲಿ ಜನಕಪುರಿ ವಾರಿಯರ್ಸ್ ಮೇಲೆ ದೆಹಲಿ ತುಳುಸಿರಿಯವರು ಜಯಗಳಿಸಿದರು. ಸಂತೋಷ್ ಎಚ್.ಎಚ್. ಪಂದ್ಯ ಪುರುಷೋತ್ತಮರಾದರು. ಏಳನೇ ಪಂದ್ಯ ಶಿವಸಾಯಿ ಬಿ ಮತ್ತು ಡಿಕೆಎಸ್‌ಎಸ್‌ಎಸ್ ನಡುವೆ ನಡೆದು ಇದರಲ್ಲಿ ಶಿವಸಾಯಿ ಬಿ ತಂಡ ಜಯಗಳಿಸಿದರು. ರೇವಣ್ಣ ಎಸ್ ಪಂದ್ಯ ಪುರುಷೋತ್ತಮರಾದರು.

ಏಪ್ರಿಲ್ 9ನೇ ಭಾನುವಾರದಂದು ಕ್ರಿಕೆಟ್ ಪಂದ್ಯಾವಳಿ ಮುಂದುವರಿಯಿತು. ಎಂಟನೇ ಪಂದ್ಯದಲ್ಲಿ ಕೂರ್ಗ್ ವಾರಿಯರ್ಸ್ ತಂಡ ಜೆಎಸ್‌ಎಸ್ ನೋಯ್ಡಾ ತಂಡದ ಮೇಲೆ ಜಯಗಳಿಸಿದರು. ಚಾರ್ಲಿ ಪಂದ್ಯ ಪುರುಷೋತ್ತಮರಾದರು. ಶಿವಸಾಯಿ ಗ್ರೂಪ್-ಎ ಹಾಗೂ ಕನ್ನಡ ಗೆಳೆಯರ ನಡುವೆ ನಡೆದ 9ನೇ ಪಂದ್ಯದಲ್ಲಿ ಶಿವಸಾಯಿ ಗ್ರೂಪ್-ಎ ತಂಡದವರು ಜಯಗಳಿಸಿದರು. ಹತ್ತನೇ ಪಂದ್ಯ ಶಿವಸಾಯಿ ಕ್ಯಾಪಿಟಲ್ ಹಾಗೂ ಕರ್ನಾಟಕ ಕಮಾಂಡೋಸ್ ನಡುವೆ ನಡೆದು ಈ ಪಂದ್ಯದಲ್ಲಿ ಕರ್ನಾಟಕ ಕಮಾಂಡೋಸ್ ಜಯಗಳಿಸಿದರು ಶಿವು ಪಂದ್ಯ ಪುರುಷೋತ್ತಮರಾದರು. 11ನೇ ಪದ್ಯದಲ್ಲಿ ಕರ್ನಾಟಕ ಭವನ ಮತ್ತು ಕರ್ನಾಟಕ ಏರ್ ಸ್ಟ್ರೈಕರ್ಸ್ ತಂಡಗಳು ಸ್ಪರ್ಧಿಸಿ ಕರ್ನಾಟಕ ಭವನದವರು ಜಯಗಳಿಸಿದರು. ಕರ್ನಾಟಕ ಕಮಾಂಡೋಸ್ ಮತ್ತು ಪೂಸಾ ವಾರಿಯರ್ಸ್ ನಡುವೆ ನಡೆದ 12ನೇ ಪಂದ್ಯದಲ್ಲಿ ಕರ್ನಾಟಕ ಕಮಾಂಡೋಸ್ ಜಯಗಳಿಸಿದರು. 13ನೇ ಪಂದ್ಯದಲ್ಲಿ ಮಯೂರ ಕೆಎಸ್‌ಟಿಡಿಸಿ ತಂಡವು ಪೂಸಾ ಕಿಸಾನ್ ತಂಡವನ್ನು ಪರಾಜಯಗೊಳಿಸಿತು.

ಏಪ್ರಿಲ್ 14ರಂದು ಮುಂದುವರಿದ ಪಂದ್ಯಾವಳಿಯ 14ನೇ ಪಂದ್ಯದಲ್ಲಿ ಶಿವಸಾಯಿ ಗ್ರೂಪ್-ಎ ತಂಡ ಕೂರ್ಗ್ ವಾರಿಯರ್ಸ್ ತಂಡದ ಮೇಲೆ





ಜಯಗಳಿಸಿದರು. ದೆಹಲಿ ತುಳುಸಿರಿ ಹಾಗೂ ಶಿವಸಾಯಿ–ಬಿ ತಂಡಗಳ ನಡುವೆ ನಡೆದ 15ನೇ ಪಂದ್ಯದಲ್ಲಿ ದೆಹಲಿ ತುಳುಸಿರಿ ಜಯಗಳಿಸಿತು. 16ನೇ ಪಂದ್ಯದಲ್ಲಿ ಶಿವಸಾಯಿ ಗ್ರೂಪ್–ಎ ತಂಡದ ವಿರುದ್ಧ ಕರ್ನಾಟಕ ಕಮಾಂಡೋಸ್ ಜಯಗಳಿಸಿದರು. 17ನೇ ಪಂದ್ಯ ದೆಹಲಿ ತುಳುಸಿರಿ ಮತ್ತು ಉತ್ತರ ಕರ್ನಾಟಕ ವಾರಿಯರ್ಸ್ ನಡುವೆ ನಡೆದು ದೆಹಲಿ ತುಳುಸಿರಿ ತಂಡದ ಆಟಗಾರರು ಜಯ ಸಾಧಿಸುವುದರಲ್ಲಿ ಯಶಸ್ವಿಯಾದರು. ಇಲ್ಲಿಗೆ ತಲಾ ಹತ್ತು ಓವರ್‌ಗಳ ನಾಕ್‌ಔಟ್ ಲೀಗ್ ಪಂದ್ಯಗಳು ಮುಗಿದವು.

18ನೇ ಪಂದ್ಯ ಹಾಗೂ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ಭವನ ಮತ್ತು ಮಯೂರ ಕೆಎಸ್‌ಟಿಡಿಸಿ ತಂಡಗಳು ಸಂಘರ್ಷಮಯ ಆಟವಾಡಿ ಮಯೂರ ಕೆಎಸ್‌ಟಿಡಿಸಿ ಯನ್ನು ಮಣಿಸುವ ಮೂಲಕ ಕರ್ನಾಟಕ ಭವನ ತಂಡ ಫೈನಲ್ ಪ್ರವೇಶಿಸಿತು. 19ನೇ ಹಾಗೂ ಎರಡನೇ ಸೆಮಿಫೈನಲ್ ಪಂದ್ಯ ಕರ್ನಾಟಕ ಕಮಾಂಡೋಸ್ ಹಾಗೂ ದೆಹಲಿ ತುಳು ಸಿರಿ ನಡುವೆ ನಡೆದು ಎರಡೂ ತಂಡಗಳು ಉತ್ತಮ ಪ್ರದರ್ಶನ ನೀಡಿದವು. ಕರ್ನಾಟಕ ಕಮಾಂಡೋಸ್ ಜಯಗಳಿಸುವ ಮೂಲಕ ಫೈನಲ್ ಪ್ರವೇಶಿಸಿದರು. ಅಂತಿಮವಾಗಿ ಕರ್ನಾಟಕ ಭವನ ವರ್ಸಸ್ ಕರ್ನಾಟಕ ಕಮಾಂಡೋಸ್ ನಡುವೆ ನಡೆದ ಹದಿನೈದು ಓವರ್‌ಗಳ ಫೈನಲ್ ಪಂದ್ಯದಲ್ಲಿ ಆಕರ್ಷಕ ಆಟ ಪ್ರದರ್ಶನ ನೀಡಿದ ಕರ್ನಾಟಕ ಕಮಾಂಡೋಸ್ ವಿಜೇತರಾದರು. ತಮ್ಮ ಅತ್ಯುತ್ತಮ ಪ್ರದರ್ಶನದಿಂದ ಪಂದ್ಯಾವಳಿಯಲ್ಲಿ ನೆರೆದಿದ್ದ ಕ್ರೀಡಾ ಪ್ರೇಮಿಗಳನ್ನು ಮನರಂಜಿಸಿದರು. ಕರ್ನಾಟಕ ಭವನ ತಂಡದ ಆಟಗಾರರಾದ ಮಾರುತಿ ಅವಳಿ ಉತ್ತಮ ಬೌಲರ್, ಕರ್ನಾಟಕ ಕಮಾಂಡೋಸ್ ತಂಡದ ಆಟಗಾರರಾದ ಮಾರುತಿ ಉತ್ತಮ ಬ್ಯಾಟ್ಸ್‌ಮನ್ ಮತ್ತೊಬ್ಬ ಆಟಗಾರ ವಿನೋದ್ ಕೈಕಾಡೆ ಉತ್ತಮ ಆಲ್ ರೌಂಡರ್ ಬಹುಮಾನಕ್ಕೆ ಭಾಜನರಾದರು. ಆಯಾ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಪಂದ್ಯ ಪುರುಷೋತ್ತಮರಾಗಿ ಆಯ್ಕೆಯಾದವರಿಗೆ ಪದಕ ಮತ್ತು ಟ್ರೋಫಿ ನೀಡಿ ಅಭಿನಂದಿಸಲಾಯಿತು.

ಸಿವಿಲ್ ಸರ್ವೀಸಸ್ ಗ್ರೌಂಡ್‌ನ ಎರಡೂ ಮೈದಾನಗಳಲ್ಲಿ ಮೂರು ದಿನ ಅತ್ಯಂತ ಆಕರ್ಷಕವಾಗಿ ಆಯೋಜಿಸಿದ್ದ ಈ ಕ್ರಿಕೆಟ್ ಪಂದ್ಯಾವಳಿಯ ಆಕರ್ಷಕ ಪದಕಗಳು ಮತ್ತು ಟ್ರೋಫಿಗಳ ಬಹುಮಾನ ವಿತರಣೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನವದೆಹಲಿಯ ಗುರುಗೋವಿಂದ ಸಿಂಗ್ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾದ ಡಾ. ಎಸ್.ಎಲ್. ಭಂಡಾರ್ಕರ್, ಈ ಪಂದ್ಯಾವಳಿಯಲ್ಲಿ ಭಾಗವಹಿಸಿ ಸ್ನೇಹ ಬಾಂಧವ್ಯದಿಂದ ಕ್ರೀಡಾ ಸ್ಫೂರ್ತಿ ತೋರಿ ಆಟವಾಡಿದ ಎಲ್ಲಾ ತಂಡದ ಆಟಗಾರರಿಗೂ, ಆಯೋಜಕರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ದೆಹಲಿ ಕರ್ನಾಟಕ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ್ ಮತ್ತು ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಭಾಗವಹಿಸಿದ ಎಲ್ಲಾ ಆಟಗಾರರಿಗೂ, ಅಂಪಾಯರ್ಸ್, ಸ್ಕೋರರ್ಸ್ ಮತ್ತು ವೀಕ್ಷಕ ವಿವರಣೆ ನೀಡಿದ ಶ್ರೀ ಶ್ರೀಹರಿಶೇಖರ್, ಶ್ರೀ ಕೆ.ಎಸ್. ಮೂರ್ತಿ, ಶ್ರೀ ನರಸಿಂಹಮೂರ್ತಿ, ಶ್ರೀ ಪ್ರಭಾಕರ ಮಡ್ಡಿತೋಟ್, ಶ್ರೀ ಕೃಷ್ಣರಾಜ್ ಮತ್ತಿತರ ದೆಹಲಿ ಕನ್ನಡಿಗರಿಗೆ ಹಾಗೂ ಮೈದಾನಕ್ಕೆ ಒಂದು ಪ್ರೋತ್ಸಾಹ ನೀಡಿದ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಎಲ್ಲಾ ತಂಡದ ಆಟಗಾರರಿಗೆ ವಿವಿಧ ಬಣ್ಣದ ಸಮವಸ್ತ್ರ (ಟೀ ಶರ್ಟ್) ಮತ್ತು ಟೋಪಿಗಳನ್ನು ನೀಡಿದ್ದು ಈ ವರ್ಷದ ವಿಶೇಷವಾಗಿತ್ತು. ಈ ಐತಿಹಾಸಿಕ ಕ್ರಿಕೆಟ್ ಪಂದ್ಯಾವಳಿಯನ್ನು ವಿನೂತನವಾಗಿ, ಯಶಸ್ವಿಯಾಗಿ ಆಯೋಜಿಸಲು ಸಹಕರಿಸಿದ ನಮ್ಮ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ಉಪಾಧ್ಯಕ್ಷರು, ಖಜಾಂಚಿ, ಜಂಟಿ ಕಾರ್ಯದರ್ಶಿಗಳು ಸಮಿತಿ ಸದಸ್ಯರು ಹಾಗೂ ಸಂಘದ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗೆ ಕೃತಜ್ಞತೆಗಳು.

***ಸಂತೋಷ ಜೆ.,*** ಸಂಚಾಲಕರು ಮತ್ತು

***ಡಾ. ಎಂ.ಎಸ್. ಶಶಿಕುಮಾರ್,*** ಅಧ್ಯಕ್ಷರು, ಕ್ರೀಡಾ ಸಮಿತಿ















**ಏಪ್ರಿಲ್ 8,9, ಮತ್ತು 14, 2023 ರಂದು ನವದೆಹಲಿಯ ವಿನಯ್ ಮಾರ್ಗದಲ್ಲಿರುವ ಸಿವಿಲ್ ಸರ್ವಿಸಸ್ ಕ್ರಿಕೆಟ್ ಮೈದಾನದಲ್ಲಿ ಆಯೋಜನೆಗೊಂಡ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯ ಆಯ್ದ ಛಾಯಾ ಚಿತ್ರಗಳು**















# ಸ್ನೇಹ ಅಸೋಸಿಯೇಷನ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಭ್ರಮಾಚರಣೆ



"ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾಃ ಯತ್ರೈತಾಸ್ತುನ ಪೂಜ್ಯಂತೆ ಸರ್ವಾಸ್ತತ್ರಾಫಲಾಃ ಕ್ರಿಯಾಃ॥" ಈ ಶ್ಲೋಕದ ಅರ್ಥ–ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಸಂತುಷ್ಟರಾಗಿರುತ್ತಾರೆ, ಸ್ತ್ರೀಯರನ್ನೆಲ್ಲಿ ಅವಮಾನಗೊಳಿಸಲಾಗುತ್ತದೋ ಅಲ್ಲಿ ಮಾಡಿದ ಕಾರ್ಯಗಳೆಲ್ಲವೂ ವ್ಯರ್ಥ ಎಂದು, ಈ ಮಾತು ಭಾರತೀಯ ಪರಂಪರೆಯಲ್ಲಿ ಹೆಣ್ಣೊಬ್ಬಳ ಸ್ಥಾನಮಾನವನ್ನು ಸೂಚಿಸುತ್ತದೆ. ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್‌ನ ಎಲ್ಲಾ ಸದಸ್ಯರು ಬಹಳ ಸಂಭ್ರಮದಿಂದ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿದರು. ಶ್ರೀಮತಿ ರೇಖಾನಾಯಕ್, ಶ್ರೀಮತಿ ರೀನಾ ಕುರ್‌ಮೋಳಿ ಹಾಗೂ ಶ್ರೀಮತಿ ಸುಜಾತ ನಾಯಕ್ ಪ್ರಾರ್ಥನೆಯೊಂದಿಗೆ, ಎಲ್ಲರೂ ಒಟ್ಟಾಗಿ ರಾಷ್ಟ್ರಗೀತೆಯನ್ನು ಹಾಡುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಡಾ॥ ಲತಾ ಕಾಮತ್ ಅವರು ಆಗಮಿಸಿದ್ದರು. ಜನಕಾಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮತ್ತು ಸದಸ್ಯರು, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಮತ್ತು ಶ್ರೀಮತಿ ಶೋಭಾ ನಾಗರಾಜ್ ಅವರು ಉಪಸ್ಥಿತರಿದ್ದರು. ಅಧ್ಯಕ್ಷೆ ಶ್ರೀಮತಿ ಸರೋಜ ಮಾಧವ ಅವರು ಎಲ್ಲರನ್ನೂ ಹೃದಯ ಪೂರ್ವಕವಾಗಿ ಸ್ವಾಗತಿಸಿ ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು.


ಪ್ರಾಸ್ತಾವಿಕ ನುಡಿಯೊಂದಿಗೆ ಮಹಿಳಾ ದಿನಾಚರಣೆಯ ಹಿನ್ನೆಲೆ ಬಗ್ಗೆ ಶ್ರೀಮತಿ ಸರೋಜಾ ಮಾಧವ ಅವರು ತಿಳಿಸುತ್ತಾ ನ್ಯೂಯಾರ್ಕ್‌ನ ಕಾರ್ಮಿಕ ಮಹಿಳೆಯರು ತಮ್ಮ ಕೆಲಸದ ವೇಳೆಯನ್ನು ಕಡಿಮೆ ಮಾಡಲು ಮತ್ತು ವೇತನವನ್ನು ಹೆಚ್ಚಿಸಲು ಚಳವಳಿ ಮಾಡಿದರು. ರೊಚ್ಚಿಗೆದ್ದ ಫ್ಯಾಕ್ಟರಿಯ ಮಾಲಿಕ ಮಹಿಳೆಯರನ್ನು ಫ್ಯಾಕ್ಟರಿಯಲ್ಲಿ ಬಂದಿಸಿದಾಗ ಅಲ್ಲಿ ನಡೆದ ಬೆಂಕಿಯ ಅನಾಹುತದಿಂದಾಗಿ 129 ಮಹಿಳೆಯರು ಹುತಾತ್ಮರಾದರು. ಅಂದಿನಿಂದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದರು. 1909 ರಲ್ಲಿ ಅಮೇರಿಕಾ ಸಮಾಜವಾದಿ ಪಾರ್ಟಿಯು ಮಾರ್ಚ್ 8 ರಂದು ಮಹಿಳಾ ದಿನಾಚರಣೆಯ ದಿನವನ್ನಾಗಿ ಘೋಷಿಸಿತು. ನಂತರ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಮಾರ್ಚ್ 8 ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಮಹಿಳೆಯರ ಸಾಧನೆಯನ್ನು ಸ್ಮರಿಸಲು, ಲಿಂಗ ಪಕ್ಷಪಾತದ ವಿರುದ್ಧ ಜಾಗೃತಿ ಮೂಡಿಸಲು ಮತ್ತು ಸಮಾನತೆಗಾಗಿ ಕ್ರಮ ತೆಗೆದುಕೊಳ್ಳಲು ಈ ದಿನವನ್ನು ಆಚರಿಸಲಾಗುತ್ತದೆ ಎಂದರು. ಇಂದು ಮಹಿಳೆಯರು ತಮ್ಮ ಸಾಮರ್ಥ್ಯಗಳನ್ನು ಅರಿತುಕೊಳ್ಳಲು ತಮ್ಮ ಮನೆ ಮತ್ತು ಇಡೀ ಸಮಾಜದ ಯಶಸ್ವಿಗೆ ಕೊಡುಗೆ ನೀಡುವ ಮೂಲಕ ಎಲ್ಲಾ ಕ್ಷೇತ್ರಗಳಲ್ಲಿ ಅಂದರೆ ರಾಜಕೀಯದಲ್ಲಿ, ಬಾಹ್ಯಾಕಾಶಕ್ಕೆ ಪ್ರಯಾಣಿಸುತ್ತಿದ್ದಾರೆ, ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಆಧುನಿಕ ಮಹಿಳೆಯರು ಇನ್ನು ಮುಂದೆ ಪುರುಷರ ಮೇಲೆ ಅವಲಂಬಿತವಾಗಿಲ್ಲ ಅವಳು ಸ್ವತಂತ್ರ ಮತ್ತು ಪ್ರತಿಯೊಂದು ಅಂಶದಲ್ಲಿ ಆತ್ಮವಿಶ್ವಾಸವನ್ನು ಹೊಂದಿದ್ದಾಳೆ ಮತ್ತು ಪುರುಷರಿಗೆ ಸಮಾನವಾಗಿ ಎಲ್ಲವನ್ನೂ ಮಾಡಲು ಸಮರ್ಥಳು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮೂಹ ಗೀತಾಗಾಯನವನ್ನು ಗೆಳತಿಯರು ಹಾಡಿದರು. ನಂತರ ಜಂಟಿ ಕಾರ್ಯದರ್ಶಿಯಾದ ಶ್ರೀಮತಿ ರತ್ನ ಅವರು ವಾರ್ಷಿಕ ವರದಿಯನ್ನು ನೀಡಿದರು. ಈ ವರ್ಷದ ವಿಶಿಷ್ಟ ಕನ್ನಡತಿ ಪ್ರಶಸ್ತಿಯನ್ನು ಶ್ರೀಮತಿ ಲತಾ ನರೇಂದ್ರ ಅವರಿಗೆ ನೀಡಿ ಗೌರವಿಸಲಾಯಿತು. ಇವರ ಪರಿಚಯವನ್ನು ಶ್ರೀಮತಿ ರಾಧಾ ಕೌಜಲಗಿಯವರು ತಿಳಿಸಿದರು. ಮುಖ್ಯ ಅತಿಥಿಗಳನ್ನು ಸಭೆಯಲ್ಲಿ ಗೌರವಿಸಲಾಯಿತು. ಇನ್ನೂ ವಿಶೇಷವಾಗಿ ದೆಹಲಿಯಿಂದ ತಾಯ್ನಾಡಿಗೆ ಮರಳುತ್ತಿರುವ ಶ್ರೀಮತಿ ನಯನಾ ಶೆಟ್ಟಿಯವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳು ನಮ್ಮನ್ನೆಲ್ಲಾ ಪರಿಚಯ ಮಾಡಿಕೊಂಡು ಮಾತನಾಡುತ್ತಾ ಮಹಿಳೆಯರು ಅಬಲೆಯರಲ್ಲಾ ಸಬಲೆಯರು ಎಂದು ತುಂಬಾ ಸೊಗಸಾಗಿ ಉದಾಹರಣೆಗಳನ್ನು ನೀಡುತ್ತಾ ತಿಳಿಸಿದರು. 1875ರ ಮಾರ್ಚ್ 8 ರಂದು ನ್ಯೂಯಾರ್ಕ್‌ನಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಮಾಡಿದ ಹೋರಾಟದಿಂದ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆರಂಭಿಸಲಾಯಿತು. ವಿಶ್ವ ಸಂಸ್ಥೆಯು ಪ್ರತಿ ವರ್ಷವೂ ಮಾರ್ಚ್ 8 ರಂದು ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಹೊಸ ಹೊಸ ಥೀಮ್‌ನೊಂದಿಗೆ ಆಚರಣೆ ಮಾಡಲಾಗುತ್ತಿದ್ದು ಈ ವರ್ಷ ಯು.ಎನ್. ಥೀಮ್ "ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ" ಎಂದು ಘೋಷಿಸಿದೆ. ಮಹಿಳೆಯರ ಸ್ಥಿತಿಗತಿ ಆಯೋಗದ ಮುಂಬರುವ 67ನೇ ಅಧಿವೇಶನದ ಆದ್ಯತೆಯ ಥೀಮ್‌ನೊಂದಿಗೆ ಈ ಥೀಮ್ ಅನ್ನು ಹೊಂದಿಸಲಾಗಿದೆ. "ಲಿಂಗ ಸಮಾನತೆ ಮತ್ತು ಮಹಿಳೆಯರು ಮತ್ತು ಹುಡುಗಿಯರ ಸಬಲೀಕರಣಕ್ಕಾಗಿ ಡಿಜಿಟಲ್ ಯುಗದಲ್ಲಿ ನಾವೀನ್ಯತೆ ಮತ್ತು ತಾಂತ್ರಿಕ ಬದಲಾವಣೆ ಮತ್ತು ಶಿಕ್ಷಣ" ಎನ್ನುವುದಾಗಿದೆ ಎಂದು ತಿಳಿಸಿದರು. ಮಹಿಳೆಯರು ತಮ್ಮ ಆರೋಗ್ಯವನ್ನು ಯಾವ ರೀತಿ ಕಾಪಾಡಿಕೊಳ್ಳಬೇಕು, ತಾಯಿಯು ತನ್ನ ಮಕ್ಕಳಿಗೆ ಸರಿಸಮನಾಗಿ ಅಂದರೆ ಹೆಣ್ಣು ಮಕ್ಕಳಿಗೆ ಯಾವ ರೀತಿ ನಮ್ಮ ಸಂಸ್ಕೃತಿಯನ್ನು, ಅಡುಗೆ ಮನೆಯಿಂದ ಎಲ್ಲಾ ರೀತಿಯ ಅಭ್ಯಾಸವನ್ನು ಮಾಡಿಸಿ ಬೆಳಸುತ್ತಾರೋ ಅದೇ ರೀತಿ ಗಂಡು ಮಕ್ಕಳಿಗೂ ಅಭ್ಯಾಸ ಮಾಡಿಸುವಂತಾಗಬೇಕೆಂದು ಡಾ. ಲತಾ ಕಾಮತ್ ತಿಳಿಸಿದರು.

ಶ್ರೀಮತಿ ರತ್ನ ಅವರು ವಂದನಾರ್ಪಣೆಯನ್ನು ಮಾಡಿದರು. ನಂತರ ಎಲ್ಲರೂ ಸಂಘದ ಆವರಣದಲ್ಲಿ ಅತಿಥಿಗಳೊಂದಿಗೆ ಗ್ರೂಪ್ ಫೋಟೋ ತೆಗೆಸಿಕೊಂಡು ಶುಚಿಯಾಗಿ ರುಚಿಯಾಗಿ ತಯಾರಿಸಿದ ಶರೀಫ್ ಅಣ್ಣನವರ ಊಟವನ್ನು ಸವಿದು ಸಂಭ್ರಮಿಸಿದರು.

ವರದಿ : **ಶ್ರೀಮತಿ ರತ್ನ**

## ಶ್ರದ್ಧಾಂಜಲಿ



**ಶ್ರೀ ರಾಮಚಂದ್ರ ರಾವ್**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಮತ್ತು ಹಿರಿಯ ಕನ್ನಡಿಗರಾದ ಶ್ರೀ ರಾಮಚಂದ್ರ ರಾವ್ ಅವರು ದಿನಾಂಕ 07.04.2023 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.

**ಶ್ರೀಯುತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ. ಸಮಸ್ತ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ.**

# ದೇಶದ ಭವಿಷ್ಯ ಮಕ್ಕಳ ಹೆಗಲ ಮೇಲಿದೆ - ಡಾ. ಗುರುಲಿಂಗಪ್ಪ ಎಂ. ಪಾಟೀಲ್

ತಾಯಿಯ ಮಾರ್ಗದರ್ಶನವೇ ಜೀವನದ ಅತಿ ದೊಡ್ಡ ಸಂಪತ್ತು. ಜ್ಞಾನ, ಸಂಸ್ಕಾರ ಎಲ್ಲವನ್ನು ಮಕ್ಕಳು ತಾಯಿಯಿಂದಲೇ ಕಲಿಯುತ್ತಾರೆ. ಬಾಲ್ಯದಲ್ಲಿ ತಾಯಿ ಹೇಳಿದ ಕತೆಯಿಂದ ಸ್ವಾಭಿಮಾನ, ನಾಡಾಭಿಮಾನ, ದೇಶಾಭಿಮಾನ ಬೆಳೆಸಿ ವೀರನಾಗಿ ಮೆರೆದ ಶಿವಾಜಿ ಮಹಾರಾಜರೇ ಇದಕ್ಕೆ ಸಾಕ್ಷಿ. ತಾಯಿಯೇ ಮಗುವಿನ ವಿಶ್ವಕೋಶ, ವಿಶ್ವವಿದ್ಯಾಲಯ. ಮಕ್ಕಳ ಸಾಹಿತ್ಯ ಆರಂಭವಾಗುವುದೇ ತಾಯಿಯಿಂದ. ಒಂದು ದೇಶದ ಭವಿಷ್ಯ ಮಕ್ಕಳ ಹೆಗಲ ಮೇಲಿದೆ. ಹಾಗಾಗಿ ಎಳವೆಯಿಂದಲೇ ಸೂಕ್ತ ಮಾರ್ಗದರ್ಶನದೊಂದಿಗೆ ಅವರ ಪ್ರತಿಭೆಗೆ ವೇದಿಕೆ ಒದಗಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಲಿಂಗಯಾಸ್ ವಿದ್ಯಾಪೀಠದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮಾಜಿ ಉಪ ಕುಲಪತಿ, ಡಾ. ಗುರುಲಿಂಗಪ್ಪ ಎಂ. ಪಾಟೀಲ್ ಹೇಳಿದರು. ಅವರು ಇತ್ತೀಚೆಗೆ ನಿಸ್ತಂತು ಮಾಧ್ಯಮ ಮೂಲಕ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು (ರಿ.) ದೆಹಲಿ ಘಟಕವು ವಿಶ್ವ ಪುಸ್ತಕ ದಿನಾಚರಣೆ ಹಾಗೂ ಬಸವ ಜಯಂತಿಯ ಪ್ರಯುಕ್ತ ಆಯೋಜಿಸಿದ ಪುಸ್ತಕ ವಂದನೆ–ಬಸವ ಸ್ಮರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಭಾರತದ ಪ್ರಾಚೀನ ವಿಶ್ವವಿದ್ಯಾಲಯ ನಳಂದಾದಲ್ಲಿ 90 ಲಕ್ಷ ಪುಸ್ತಕಗಳು ಇದ್ದವು ಎಂಬ ಐತಿಹಾಸಿಕ ಮಾಹಿತಿಯಿದೆ. ಪ್ರಾಚೀನ, ಮಧ್ಯಕಾಲೀನ ಕಾಲದಲ್ಲಿಯೇ ಜ್ಞಾನಧಾರೆಯಲ್ಲಿ ನಮ್ಮ ದೇಶವು ವಿಶ್ವದ ಉತ್ತುಂಗದ ಸ್ಥಿತಿಯಲ್ಲಿತ್ತು. ಸಮೃದ್ಧವಾದ ವಿದ್ವತ್, ವಿದ್ವಾಂಸರು ನಮ್ಮ ನಾಡಿನಲ್ಲಿ ಇದ್ದರು. ವಿಶ್ವ ಪ್ರಜಾಪ್ರಭುತ್ವದ ಪ್ರಥಮ ರೂವಾರಿ ಬಸವಣ್ಣ ಸಮಾನತೆಯ ಹರಿಕಾರನಾಗಿ ಜಗತ್ತಿಗೆ ಬೆಳಕಾದವರು. ಮಕ್ಕಳಿಗೆ ಮಾರ್ಗದರ್ಶನವಾಗುವ ವಚನಗಳನ್ನೊಳಗೊಂಡ ಶ್ರೇಷ್ಠ ಸಾಹಿತ್ಯವನ್ನು ಜಗತ್ತಿಗೆ ನೀಡಿದವರು ವಚನಕಾರರು. ಹೆಣ್ಣು ಮಕ್ಕಳ ಸಶಸ್ತ್ರೀಕರಣ, ಸಬಲೀಕರಣಕ್ಕೆ ಬಸವಣ್ಣನ ಕಾಲದಲ್ಲಿಯೇ ಒತ್ತು ನೀಡಲಾಗಿತ್ತು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪುಸ್ತಕ ದಿನಾಚರಣೆಯ ಕುರಿತಾದ ನುಡಿಮುತ್ತು, ವಿಚಾರಧಾರೆ ಹಾಗೂ ವಚನ ಗಾಯನವನ್ನು ಕು. ಸೃಜನ್ ಆರ್., ಕು. ಮೊಹಮ್ಮದ್ ಸಾಹಿಲ್, ಕು. ನಿಖಿತಾ ನಾಗೇಶ್, ಕು. ಅಂಕಿತಾ ನಾಗೇಶ್, ಕು. ಹರ್ಷಿತಾ ಉಭಾಳೆ, ಕು. ಸಿಂಚನಾ ನಾಯ್ಕ್, ಕು. ನಂದಿತಾ ಉಭಾಳೆ, ಕು. ಸುಮಂತ್ ಆಚಾರ್ಯ ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಜೆಎನ್‌ಯು ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ ಪ್ರೊ. ವಿಶ್ವನಾಥ, ಕ.ರಾ.ಮ. ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಗೌರವಾಧ್ಯಕ್ಷ ಜಯರಾಜ್ ಪಿ., ಅಧ್ಯಕ್ಷ ಅರವಿಂದ ಬಿಜ್ಜೆ, ಉಪಾಧ್ಯಕ್ಷ ಕೆ.ಎಸ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ, ಖಜಾಂಚಿ ರಾಮಚಂದ್ರ ಉಭಾಳೆ, ಸಂಚಾಲಕ ಕೃಷ್ಣರಾಜ್ ಹಾಗೂ ಸಮಿತಿ ಸದಸ್ಯರಾದ ಶ್ರೀಮತಿ ವಿಮಲಾ ರಂಗನಾಥ್, ನಾಗರಾಜ್ ಎಂ., ಕುಮಾರಿ ಪೂರ್ಣಿಮ ಅಡಿಗ, ಪರಿಷತ್ತಿನ ಕೇಂದ್ರ ಘಟಕ ನಿರ್ದೇಶಕ ಅರುಣ್ ಹಾಗೂ ಹಲವಾರು ಕನ್ನಡಿಗರು, ಪೋಷಕರು, ಮಕ್ಕಳು ಉಪಸ್ಥಿತರಿದ್ದರು.

ಪರಿಷತ್ತಿನ ಉಪಾಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ವರ್ಷಾ ಕುಲಕರ್ಣಿ ಪ್ರಾಸ್ತಾವಿಕ ಮಾತನಾಡಿದರು. ಸಂಚಾಲಕ ಗೋಪಾಲಕೃಷ್ಣ ಭಟ್ ಅತಿಥಿ ಪರಿಚಯ ಮಾಡಿಕೊಟ್ಟರು. ಸದಸ್ಯೆ ಶ್ರೀಮತಿ ಸುಜಾತ ಶಾಂತಕುಮಾರ್ ನಿಂಬಾಳ ವಂದನೆಗಳನ್ನು ಅರ್ಪಿಸಿದರು. ಕು. ಶ್ರೇಯಾ ಹೆಚ್. ತೇಲಿ ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು.

# ಮನಮೋಹಕ ತಾಣ.. ರಾಜಸ್ಥಾನದ ಅಲ್ವರ್ ಯಾಣ

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ವತಿಯಿಂದ ಮಕ್ಕಳಲ್ಲಿ ಐತಿಹಾಸಿಕ, ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸುವ ಸಲುವಾಗಿ ರಾಜಸ್ಥಾನದ ಅಲ್ವರ್‌ಗೆ ಒಂದು ದಿನದ ಪ್ರವಾಸವನ್ನು 02.04.2023ರಂದು ಆಯೋಜಿಸಲಾಗಿತ್ತು. ಈ ಪ್ರವಾಸವು ಮಕ್ಕಳಿಗೆ ಉಚಿತವಾಗಿದ್ದು ದೆಹಲಿಯಿಂದ ಹಾಗೂ ಭಿವಾಡಿಯಿಂದ 32 ಮಕ್ಕಳೊಂದಿಗೆ ಒಟ್ಟು 63 ಸದಸ್ಯರು ಭಾಗವಹಿಸಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಲೋಧಿ ಎಸ್ಟೇಟ್‌ನಿಂದ ಆರಂಭವಾದ ಈ ಪ್ರವಾಸಕ್ಕೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಹಾಗೂ ದೆಹಲಿ ಕರ್ನಾಟಕ ಸಂಘದಿಂದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಚಾಲನೆ ನೀಡಿದರು. ಅರಾವಳಿ ಪರ್ವತ ಶ್ರೇಣಿಯ ನಡುವಿನಲ್ಲಿರುವ ರಾಜಸ್ಥಾನದ ಜನಪ್ರಿಯ ಪ್ರವಾಸಿತಾಣ ಅಲ್ವರ್ ನಗರದ ಇತಿಹಾಸವು 1500 ವರ್ಷಗಳ ಹಿಂದಿನದು. ಅರಮನೆಗಳು ಮತ್ತು ಕೋಟೆಗಳು ಇಲ್ಲಿನ ಪ್ರಮುಖ ಆಕರ್ಷಣೆಗಳು.

ದೆಹಲಿಯಿಂದ ಮುಂಜಾನೆ 6.15ಕ್ಕೆ ಹೊರಟು ಉಪಾಹಾರ ಸವಿಯುತ್ತಾ ಭಿವಾಡಿ ಮೂಲಕ 11 ಗಂಟೆಗೆ 160 ಕಿ.ಮೀ. ದೂರದ ಅಲ್ವರ್ ತಲುಪಿದೆವು. ಮೊದಲಿಗೆ **ಬಾಲ್‌ಕಿಲಾ** ಪ್ರವಾಸಿ ಸ್ಥಳಕ್ಕೆ ಭೇಟಿ ನೀಡಿದೆವು. ಬಾಲ್‌ಕಿಲಾ ಅಥವಾ ಯುವ ಕೋಟೆಯನ್ನು ವಾಸ್ತವವಾಗಿ ಕ್ರಿ.ಶ. 1550ರಲ್ಲಿ ಹಸನ್ ಖಾನ್ ಮೇವಾವತಿ ನಿರ್ಮಿಸಿದರು.

**ಅರಮನೆ ಮೂಸಿಯಂ** : ನಂತರ ನೋಡಿದ ಈ ಅರಮನೆಯು ಅಲ್ವರ್‌ನ ಪ್ರಮುಖ ಪ್ರವಾಸಿ ಆಕರ್ಷಣೆಗಳಲ್ಲಿ ಒಂದಾಗಿದ್ದು, ಸರ್ಕಾರಿ ವಸ್ತುಸಂಗ್ರಹಾಲಯ ಎಂದೂ ಕರೆಯಲ್ಪಡುತ್ತದೆ. ಅನೇಕ ಅಪರೂಪದ ಹಸ್ತಪ್ರತಿಗಳು, ಶಿಲ್ಪಗಳು, ವಸ್ತುಗಳು, ವರ್ಣಚಿತ್ರಗಳು ರಾಜ ಪೋಷಾಕು, ಯುದ್ಧ ಆಯುಧ ಸಾಮಗ್ರಿಗಳು ಮತ್ತು ಹಸ್ತಪ್ರತಿಗಳು ಇಲ್ಲಿವೆ. **ಮೂಸಿ ಮಹಾರಾಣಿ ಕಿ ಛತ್ರಿ** : ಇದೂ ಸಹಾ ಅಲ್ವರ್‌ನಲ್ಲಿರುವ ಪ್ರಮುಖ ಸ್ಮಶಾನಗಳಲ್ಲಿ ಒಂದಾಗಿದೆ. ರಾಜ ಮಹಾರಾಜ ಬಖ್ತಾವರ್ ಸಿಂಗ್ ಮತ್ತು ಅವರ ರಾಣಿ ಮೂಸಿಮಹಾ ರಾಣಿ ಅವರ ಗೌರವಾರ್ಥವಾಗಿ ಅರಮನೆಯ ಹೊರಗೆ ನಿರ್ಮಿಸಲಾಗಿದೆ.

**ಭರ್ತೃಹರಿ ದೇವಾಲಯ** : ಅಲ್ವರ್ ಮುಖ್ಯ ನಗರದಿಂದ 30 ಕಿ.ಮೀ. ದೂರದಲ್ಲಿ ಸರಿಸ್ಕಾ ರಾಷ್ಟ್ರೀಯ ಉದ್ಯಾನವನದ ಸಮೀಪದಲ್ಲಿರುವ ಪೂಜ್ಯ ಹಿಂದೂ ದೇವಾಲಯಕ್ಕೆ, ಉಜ್ಜಯಿನಿಯ ಅಂದಿನ ಆಡಳಿತಗಾರ ಭರ್ತೃಹರಿ ಬಾಬಾ ಅವರ ಹೆಸರಿಡಲಾಗಿದೆ. ಅಲ್ಲಿಗೆ ತೆರಳಿ ದೇವರ ದರ್ಶನದೊಂದಿಗೆ ಇಲ್ಲಿರುವ ಪ್ರಾಚೀನ ಗುಹೆಯೊಳಗೂ ಮೊಣಕಾಲಿನಲ್ಲಿ ಸಾಗಿ ಬಂದೆವು. ಪ್ರವಾಸಿಗರೆಲ್ಲರಿಗೂ ವ್ಯವಸ್ಥಿತವಾದ ಊಟ–ಉಪಾಹಾರಗಳನ್ನು ಆಯೋಜಿಸಲಾಗಿತ್ತು. ಬಿಸಿ ಬಿಸಿ ಭೋಜನ ಸವಿದೆವು.

**ನಟ್ನಿ ಕಾ ಬಾರಾ ದೇವಾಲಯ** : ಸಂಜೆಯ ವೇಳೆಗೆ ಯಮುನಾ ನದಿಯ ಉಪನದಿಯಾದ ಬಾರಾ ನದಿಯ ಮೇಲಿರುವ ನಟ್ನಿ ಕಾ ಬಾರಾ ದೇವಾಲಯಕ್ಕೆ ಭೇಟಿ ನೀಡಿದೆವು. ಪ್ರವಾಸದ ವೇಳೆ ಬಸ್ಸಿನಲ್ಲಿ ಶಿಶುಗೀತೆಗಳು, ಭಾವಗೀತೆಗಳು, ಅಂತ್ಯಾಕ್ಷರಿ, ರಸಪ್ರಶ್ನೆ, ಆಶುಭಾಷಣ, ಅಭಿನಯ, ಚರ್ಚೆ ಮುಂತಾದ ಹಲವಾರು ಕನ್ನಡ ಚಟುವಟಿಕೆ, ಸ್ಪರ್ಧೆಗಳಲ್ಲಿ ಮಕ್ಕಳಲ್ಲದೆ ಪೋಷಕರು,



ಹಿರಿಯರು ಉತ್ಸಾಹದಿಂದ ಪಾಲ್ಗೊಂಡರು. ಪರಿಷತ್ತಿನ ಅಧ್ಯಕ್ಷರಾದ ಅರವಿಂದ ಬಿಜ್ಜೆ, ಉಪಾಧ್ಯಕ್ಷ ಕೆ. ಎಸ್. ಮೂರ್ತಿ, ಸಂಚಾಲಕರಾದ ಗೋಪಾಲಕೃಷ್ಣ ಭಟ್, ಶ್ರೀಮತಿ ನೇತ್ರಾ ಎಸ್. ಕುಮಾರ್ ಪ್ರವಾಸ ಸಂಯೋಜಕರುಗಳಾದ ಕೃಷ್ಣರಾಜ್, ನಾಗರಾಜ ಎಂ. ಹಾಗೂ ಮಕ್ಕಳ ಪೋಷಕರು ಉಪಸ್ಥಿತರಿದ್ದರು. ಪರಿಷತ್ತಿನ ಗೌರವಾಧ್ಯಕ್ಷರಾದ ಜಯರಾಜ್ ಪಿ., ಕೇಂದ್ರ ಘಟಕದ ನಿರ್ದೇಶಕ ಅರುಣ್ ಸೇರಿದಂತೆ ಅನೇಕರು ಪ್ರವಾಸಕ್ಕೆ ಧನ ಸಹಾಯ ಮಾಡಿದರು. ಅಲ್ವರ್ ನಗರದ ಹೊರವಲಯದಲ್ಲಿರುವ ಬೃಹತ್ ಶ್ರೀರಾಮನ ಪ್ರತಿಮೆಗೆ ನಮನ ಸಲ್ಲಿಸಿ, ಸಂಜೆ 6.30ಕ್ಕೆ ಅಲ್ವರ್‌ನಿಂದ ನಿರ್ಗಮಿಸಿ ಭಿವಾಡಿಯಲ್ಲಿ ರಾತ್ರಿ ಭೋಜನ ಮುಗಿಸಿ ರಾತ್ರಿ 11 ಘಂಟೆಗೆ ಎಲ್ಲರೂ ಸುರಕ್ಷಿತವಾಗಿ ದೆಹಲಿ ತಲುಪಿದೆವು. ಮಕ್ಕಳು ಮತ್ತು ಪೋಷಕರೊಂದಿಗೆ ಒಂದು ದಿನದ ಈ ಪ್ರವಾಸದ ಅನುಭವ ಅಹ್ಲಾದಕರ ಮತ್ತು ಮನೋಹರವಾಗಿತ್ತು.

***ಸಮಗ್ರ ವರದಿ : ಅರವಿಂದ ಬಿಜ್ಜೆ,***
ಅಧ್ಯಕ್ಷರು, ಕ.ರಾ.ಮ.ಸಾ. ಪರಿಷತ್ತು
ದೆಹಲಿ ಘಟಕ

**30.04.2023 ರಂದು ಸಂಘದಲ್ಲಿ ನಡೆದ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಆಚರಣೆಯ ಕಾರ್ಯಕ್ರಮದಲ್ಲಿ ನೂಪುರ ನೃತ್ಯ ಅಕಾಡೆಮಿಯ ಕಲಾವಿದರು ಪ್ರದರ್ಶಿಸಿದ ವಚನಗಳನ್ನಾಧಾರಿತ ನೃತ್ಯರೂಪಕಗಳು**








ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಜೊತೆ ಮುಖ್ಯ ಅತಿಥಿಗಳಾದ ಶ್ರೀ ಬಸವರಾಜ ಕಲ್ಲೂರರಿಂದ ಬೀದರ್‌ನಿಂದ ಆಗಮಿಸಿದ್ದ ಶ್ರೀ ಪ್ರಭಾಕರ್‌ರವರ ನೇತೃತ್ವದ ನೂಪುರ ನೃತ್ಯ ಅಕಾಡೆಮಿಯ ಕಲಾವಿದರನ್ನು ಗೌರವಿಸಿ ಪದಕ ಮತ್ತು ಪ್ರಶಸ್ತಿ ಪತ್ರ ಪ್ರದಾನ ಮಾಡಿದ ಸಂದರ್ಭ

# ಜನಕಪುರಿ ಕನ್ನಡ ಕೂಟದಿಂದ ರಾಮನವಮಿ ಆಚರಣೆ



ಜನಕಪುರಿ ಕನ್ನಡ ಕೂಟ 23 ಏಪ್ರಿಲ್ 2023 ರಂದು ವಿಕಾಸಪುರಿ ನೈಟಿಂಗೇಲ್ ಅಪಾರ್ಟ್‌ಮೆಂಟ್ಸ್ ಕಮ್ಯುನಿಟಿ ಹಾಲ್‌ನಲ್ಲಿ ಶ್ರೀರಾಮ ನವಮಿ ಪೂಜೆಯ ಕಾರ್ಯಕ್ರಮ ಏರ್ಪಡಿಸಿತ್ತು. ಪ್ರತಿ ವರ್ಷದಂತೆ ಕೂಟದ ಸದಸ್ಯರು ಹಾಗೂ ಅವರ ಪರಿವಾರ ಮತ್ತು ಮಿತ್ರರು ಕಾರ್ಯಕ್ರಮವನ್ನು ಯಶಸ್ಸುಗೊಳಿಸಲು ಕಾರಣರಾದರು. ಮಹಿಳಾ ಮಂಡಳಿಯವರು ದೇವರ ಭಕ್ತಿ ಗೀತೆಗಳನ್ನು ಹೇಳಿ ನೆರದಿದ್ದ ಭಕ್ತಾದಿಗಳಿಗೆ ಪಾನಕ ಮತ್ತು ಕೋಸಂಬರಿ ನೀಡಿದರು. ಪೂಜೆಯ ಸಾಮಗ್ರಿ, ಪೂಜೆಯ ಸ್ಥಳವನ್ನು ಶ್ರೀ ನಾರಾಯಣ ಭಟ್ ದಂಪತಿಗಳು ಪ್ರಾಯೋಜಿಸಿದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್‌ರವರು ಬಂದ ಸದಸ್ಯರಿಗೆ ಪ್ರಸಾದದ ವ್ಯವಸ್ಥೆ ಭೋಜನದ ಮೂಲಕ ಮಾಡಿಸಿದರು. ಸಂಘದ ಅನೇಕ ಸದಸ್ಯರು, ದೆಹಲಿ ಪೊಲೀಸ್ ಸದಸ್ಯರು, ಗುರುಗಾಂವ್ ಕನ್ನಡ ಸಂಘದ ಸ್ನೇಹಿತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೂಜೆಗೆ ಶೋಭೆ ನೀಡಿದರು. ಇಂತಹ ಉತ್ತಮವಾದ ಕಾರ್ಯಕ್ರಮವನ್ನು ಆಯೋಜಿಸಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಧನ ಧಾನ್ಯ ಸಹಾಯ ಮಾಡಿದ ಎಲ್ಲಾ ಕೂಟದ ಹಿತೈಷಿಗಳಿಗೆ ಅನಂತಾನಂತ ಧನ್ಯವಾದಗಳು.

**ಶ್ರೀನಾಥ್ ಎನ್.ಆರ್.**
ಅಧ್ಯಕ್ಷರು, ಜ.ಕ.ಕೂ.

# ಜನಕಪುರಿ ಮಹಿಳಾ ಮಂಡಳಿಯ ಸದಸ್ಯರಿಂದ
# ಭಾರತ ದರ್ಶನ ಪಾರ್ಕ್ ನಲ್ಲಿ ಸಂತಸದ ವನಭೋಜನ

ಹಲವಾರು ವರುಷಗಳಿಂದ ಕಾತುರತೆಯಿಂದ ಕಾಯುತ್ತಾ ಇದ್ದ ನಮ್ಮ ಮಹಿಳೆಯರಿಗೆ ಈ ವನಭೋಜನವು ಸಂತಸಭರಿತವಾಗಿತ್ತು. ಮಹಿಳಾ ಮಂಡಳಿ ಅಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಹಾಗೂ ಆಯೋಜಕಿ, ಕಾರ್ಯದರ್ಶಿ ಶ್ರೀಮತಿ ನಯನಾ ಮಾನಕಾಪುರೆ ಅವರು ಎಲ್ಲರನ್ನು ಪ್ರೀತಿಯಿಂದ ಸ್ವಾಗತಿಸಿದರು. ಎಲ್ಲ ಆಯು ವರ್ಗದ ಮಹಿಳೆಯರಿಗಾಗಿ ವಿದ್ಯುತ್ ಕಾರ್ಟಿನ ವಿಶೇಷವಾದ ವ್ಯವಸ್ಥೆಯೊಂದಿಗೆ ಅದ್ಭುತವಾದ ವನದ ದರ್ಶನ ಮೋಜುಗರವಾಗಿತ್ತು. ಸುಂದರವಾದ ತ್ಯಾಜ್ಯ ವಸ್ತುಗಳಿಂದ ನಿರ್ಮಿತ ಕರ್ನಾಟಕದ ದೇವಾಲಯಗಳಲ್ಲಿ ಹಂಪಿ, ಮೀನಾಕ್ಷಿ ದೇವಾಲಯ, ಗೋಳಗುಂಬಜ್ ಹಾಗೂ ಮೈಸೂರು ಅರಮನೆ ನಯನ ಮನೋಹರವಾಗಿದ್ದವು. ಎಲ್ಲರೂ ಸೇರಿ ನಕ್ಕು ನಲಿಯುವಂತಹ ವಿನೋದಯುಕ್ತ ಆಟಗಳನ್ನು ಆಡಿದರು. ದೆಹಲಿಯ ಪ್ರಸಿದ್ಧ ತಿಂಡಿ ತಿನಿಸ್ಸುಗಳನ್ನು ಮನಸಾರೆ ಸವಿದರು. ಡಾ. ಸಾಯಿಪ್ರಶಾಂತಿ ಶೆಟ್ಟಿ ಅವರ ಮುತುವರ್ಜಿಯಲ್ಲಿ ಮಹಿಳೆಯರು ತಮ್ಮ ಪ್ರೀತಿ ವಾತ್ಸಲ್ಯದ ಬಣ್ಣವನ್ನು ಹೋಳಿಹಬ್ಬ ಆಚರಣೆ ಮೂಲಕ ಹಂಚಿಕೊಂಡರು. ಶ್ರೀಮತಿ ಪ್ರೇರಣಾ ವೆಂಕಟೇಶ್ ಅವರು ವಂದನಾರ್ಪಣೆ ಸಲ್ಲಿಸುತ್ತಾ ತಮ್ಮ ಆನಂದ ವ್ಯಕ್ತಪಡಿಸಿ ಕಾರ್ಯಕಾರಿ ಸಮಿತಿಗೆ ಅಭಿನಂದಿಸಿದರು. ಹರ್ಷೋಲ್ಲಾಸದಿಂದ ತುಂಬಿದ ಈ ದಿನವು ಜೀವನಾದ್ಯಂತ ನೆನಪಿಡಲಾಗುವುದು.

***ನಯನಾ ಮಾನಕಾಪುರೆ***
ಕಾರ್ಯದರ್ಶಿ, ಜ.ಮ.ಮಂಡಳಿ,
ನವದೆಹಲಿ



ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

**ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿಯವರು ಸಾಕ್ಷಿಯಾದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮದ ಅಭೂತಪೂರ್ವ ಐತಿಹಾಸಿಕ ದೃಶ್ಯಗಳು**















Delhi Karnataka Sangha Abhimata
May -2023, Vol. No.33, Issue No. 8, Price Rs.1/-
RNI Regn. No. 53405/91, DL-SW-01/4016/22-24
Date of Publication : April 8th / 9th, Posting Date : 10th / 11th, Total Pages-20 Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

## 25.02.2023 ಮತ್ತು 26.02.2023 ರಂದು ನವದೆಹಲಿಯ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ಸಭಾಗೃಹದಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದ ಆಯ್ದ ಛಾಯಾಚಿತ್ರಗಳು







